ಪ್ರಿಯ ಸಂಗಾತಿ



ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ದ್ವೈಮಾಸಿಕ

ಮೇ 8, 1985

ಬೆಲೆ ರೂ. 1-50

ಒಳಗೇನಿದೆ ?....

ಸಂಪಾದಕ ಮಂಡಳಿ

ಎನ್. ಗಾಯತ್ರಿ, ಡಾ|| ಮಾರ್ಗರೆಟ್ ಬಿಸ್ವಾಸ್,
ಲಕ್ಷ್ಮೀ ಚಂದ್ರಶೇಖರ್, ಭಾರತಿ,
ಎಲ್. ಎ. ಶ್ಯಾಮಲಾದೇವಿ, ಧನಲಕ್ಷ್ಮಿ

ಕಲೆ: **ಕಮಲೇಶ್**

ಪ್ರಸಾರ ವ್ಯವಸ್ಥೆ : **ಎನ್. ಶಾಂತಾ**

ಪ್ರತಿಗಳಿಗೆ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
221, 4ನೇ ಮೇನ್, ವೈಯಾಳಿ ಕಾವಲ್, ಬೆಂಗಳೂರು-560 003.

ಚಂದಾ ವಿವರ

ವಾರ್ಷಿಕ ಚಂದಾ : **10** ರೂ.
ಬಿಡಿ ಪ್ರತಿ : **1–50**

* ಖಾಸಗಿ ಪ್ರಸಾರಕ್ಕಾಗಿ

ಸಂಪುಟ 1 ಸಂಚಿಕೆ 2

ಸಂವಾದ

* ಇತ್ತೀಚೆಗೆ ಲೇಖಕಿಯರ ವಿಚಾರ ಸಂಕಿರಣಗಳು ಮತ್ತು ಸಮ್ಮೇಳನಗಳು ಹಲವು ಕ ನಡೆದಿವೆ. ಲೇಖಕಿಯರಿಗೇ ಸಂಬಂಧಪಟ್ಟಂ ಅಖಿಲ ಕರ್ನಾಟಕ ಲೇಖಕಿಯರ ಸಂಘವಿದೆ ಕೆಲವು ದಿನಗಳ ಹಿಂದೆ ಇಂತಹದೊಂದು ಸಂಘ ಉತ್ತರ ಕರ್ನಾಟಕದ ಲೇಖಕಿಯರಿಗಾಗಿ ಹುಟ್ಟಿ ಕೊಂಡಿದೆ. ಈ ಹಿನ್ನೆಲೆಯಲ್ಲಿ ಈ ರೀತಿಯ ಪ್ರತ್ಯೇಕತೆ ಲೇಖಕಿಯರಿಗೆ ಅವಶ್ಯಕ ಎಂಬಂತಹ ಚರ್ಚೆ ಅಲ್ಲಲ್ಲಿ ನಡೆಯುತ್ತಿದೆ. ಈ ವಿಷಯವನ್ನು ಕುರಿತಂತೆ 'ಸಂಗಾತಿ'ಯ ಓದುಗರನ್ನು ಚರ್ಚೆಗೆ ಆಹ್ವಾನಿಸುತ್ತೇವೆ. ನಿಮ್ಮ ಅಭಿಪ್ರಾಯಗಳನ್ನು ದಯವಿಟ್ಟು ಕಳುಹಿಸಿ.

*** ಗಣಿ ಕಾರ್ಮಿಕರ ಮನೆಯ ಮಹಿಳೆಯರು**

52 ವಾರಗಳಷ್ಟು ದೀರ್ಘಕಾಲ ನಡೆದ ಬ್ರಿಟಿಷ್ ಗಣಿ ಕಾರ್ಮಿಕರ ಚರಿತ್ರಾರ್ಹ ಮುಷ್ಕರ ಇತ್ತೀಚೆಗೆ ಕೊನೆಗೊಂಡಿತು. ಈ ಮುಷ್ಕರದ ಪರವಾಗಿ ನಡೆಸಿದ ಚಳುವಳಿಯಲ್ಲಿ ಗಣಿ ಕಾರ್ಮಿಕ ಕುಟುಂಬದ ಮಹಿಳೆಯರು ನೇರವಾಗಿ, ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿ ತನ್ಮೂಲಕ ಗಂಡು-ಹೆಣ್ಣಿನ ನಡುವೆ ಸಮಾನತೆ ಸ್ಪಷ್ಟವಾಗಿ ಬೆಳೆಸಲು ನೆರವಾದರು.

Printed at ILA Printers, 153 8th cross, Chamarajapet, Bangalore-18 and published by Dr. G. Ramakrishna on behalf of Jagruthi Mahila Adhyayana Kendra, 221, IV Main, Vyalikaval, BANGALORE-3

Editor : N. Gayathri

ಉದ್ಯೋಗಸ್ಥ ಮಹಿಳೆ: ಬದಲಾವಣೆ ಅಗತ್ಯ

● ನೇಮಿಚಂದ್ರ

ಸೆರಗು ಹೊದ್ದು, ಹೊಸಿಲು ದಾಟದ, ಗಂಡ–ಮಕ್ಕಳ ಏಳಿಗೆಯಲ್ಲೇ ಸರ್ವಸುಖ ಕಾಣುವ ಸಹನಾಮಯಿ–ತ್ಯಾಗಮೂರ್ತಿ ಆದ ಹೆಣ್ಣಿನ ಸಾಂಪ್ರದಾಯಿಕ ಕಲ್ಪನೆಯ ಸಮಾಜಕ್ಕೆ, ಆಕೆ ಗಂಡಿನ ಸರಿಸಮನಾಗಿ ನಿಂತು, ಆತನನ್ನು ಮೀರಿಸಲೂ ಬಲ್ಲವಳಾಗಿ, ಆತನ ಹೊರತಾಗಿಯೂ ಪರಿಪೂರ್ಣ ವ್ಯಕ್ತಿತ್ವ ರೂಪಿಸಿಕೊಂಡು, ಆರ್ಥಿಕವಾಗಿ, ಮಾನಸಿಕವಾಗಿ ಹಾಗೂ ಬೌದ್ಧಿಕವಾಗಿ ಸ್ವಾತಂತ್ರ್ಯ ಪಡೆದ ಮಹಿಳೆಯ ಭಾವರೂಪ ಅರಗಿಸಿಕೊಳ್ಳಲಾಗಿಲ್ಲ. ಇಂದಿನ ವಿಚ್ಛೇದನ, ವಧೂದಹನದ ದಿನಗಳಲ್ಲಿ ಬದುಕಿನ ಭದ್ರತೆಗೆ ಹೆಣ್ಣು ದುಡಿಯುವುದು ಅನಿವಾರ್ಯ ಅಗತ್ಯ. ಹೀಗಿದ್ದೂ ಹೆಣ್ಣಿನ ಉದ್ಯೋಗ ಹಗುರವಾದ ವಿಷಯವಾಗಿಯೇ ಉಳಿದಿದೆ. "ಏನೋ ಮದುವೆ ಆಗೋತನಕ ಮಾಡಿಕೊಂಡಿರಲಿ, ಸುಮ್ಮನೆ ಮನೇಲಿರೋ ಬದಲು" ಎಂಬ ಧಾಟಿ. ಅಂದರೆ ಮದುವೆ ಆಗದಾಗ, ಅಥವಾ ಆಗುವವರೆಗೆ, ಮಾಡಲು ಬೇರೇನೂ ಕೆಲಸವಿಲ್ಲದಿದ್ದರೆ ಹಿಡಿಯುವ ಹುದ್ದೆ–ಉದ್ಯೋಗ. ಮದುವೆ ನಂತರವೂ ಆಕೆ ಕೆಲಸ ಮುಂದುವರೆಸಿದರೆ, ಅದು ಆರ್ಥಿಕ ಅನಿವಾರ್ಯತೆಗೆ. ಆಗೆಲ್ಲ ಆಕೆ ಸಮಾಜಕ್ಕೊಂದು ಹೊರಗೂ ಒಳಗೂ ದುಡಿವ ಅನುಕಂಪನೀಯ ವ್ಯಕ್ತಿ.

ಅಂತೂ ಮಹಿಳೆ ಉದ್ಯೋಗ ಹಿಡಿಯಬೇಕಾದರೆ ಬಲವಾದ ಕಾರಣಗಳಿರಬೇಕು. ಇಲ್ಲದಿದ್ದರೆ "ಗಂಡ–ಮಕ್ಕಳನ್ನು ಒಣಗಿಸಿ, ಸಮಾಜ ಉದ್ಧಾರ ಮಾಡುತ್ತಾಳೆ" ಎಂಬ ಕೊಂಕು ಆಕ್ಷೇಪಗಳಿಗೆ ಬಲಿಯಾಗಬೇಕು. ಮಹಿಳೆ ಕೆಲಸವನ್ನು ಹಿಡಿಯುವುದು ತನ್ನ ಖುಷಿಗೆ, ತನ್ನ ಓದಿನ ಸದುಪಯೋಗಕ್ಕೆ, ತನ್ನದಾದ ಪ್ರತ್ಯೇಕ ವ್ಯಕ್ತಿತ್ವ ವಿಕಾಸಕ್ಕೆ, ತನ್ನ ಸಾಮರ್ಥ್ಯ, ಯೋಗ್ಯತೆಗಳ ಪೂರ್ಣ ಉಪಯೋಗಕ್ಕೆ ಎಂಬುದು ನಮ್ಮಲ್ಲಿ ಅಪರಿಚಿತ ವಿಷಯ. ಹೆಣ್ಣಿನ ಓದಿಗೇ ಇನ್ನೂ ಪೂರ್ಣ ಪ್ರಾಮುಖ್ಯತೆ ಬಂದಿಲ್ಲ. "ಅವಳೇನು ದುಡಿದು ತಂದು ಹಾಕಬೇಕೇ ? ನಾಳೆ ಹೇಗಿದ್ದರೂ ಪರರ ಮನೆ ಸೇರುವವಳು," ಎಂದು ರಾಗ ಎಳೆಯುತ್ತಾರೆ. ಎಂಥದ್ದೋ ಒಂದು ಬಿ.ಎ., ಬಿ.ಎಸ್ಸಿ. ಆದ್ರೆ ಸಾಕು. ಅದೂ ಏಕೆ ಅಂದ್ರೆ ಈಗಿನ ಕಾಲದ ಹುಡುಗರಿಗೆ ಹೆಂಡತಿ ಪದವೀಧರೆ ಇರಬೇಕಲ್ಲಾ ! ಅಂತೂ ಮಹಿಳೆಯ ಬಾಲ್ಯದಿಂದ ಯೌವನದವರೆಗೆ ಆಕೆಯ ಪ್ರತಿ ತಯಾರಿ ಎಂದೋ ಬರುವ ಗಂಡನ ಬೇಡಿಕೆ, ಬಯಕೆಗಳಿಗೆ ಅನುಕೂಲಕರವಾಗಿ ತನ್ನನ್ನು ತಾ ರೂಪಿಸಿಕೊಳ್ಳುವುದು. ಇಂಥಾ ಎರಡನೇ ದರ್ಜೆಯ ಅಸ್ತಿತ್ವವನ್ನೊಮ್ಮೆ ಝಾಡಿಸಿ, ಗಂಡ–ಮಕ್ಕಳ ಬೆಳಕಲ್ಲೇ ಬೆಳಗಬೇಕಾದ ಗ್ರಹವಾಗಿ ತಾನೇನೂ ಉಳಿಯಬೇಕಿಲ್ಲ, ತನಗೂ ಸ್ವಯಂಪ್ರಭೆ ಇದೆಯೆಂಬ ಅರಿವು ಮೂಡಿ, ತನ್ನ ದಿಗ್ವಿಜಯಕ್ಕೆ ಹೊರಡಬೇಕಾಗಿದೆ ಉದ್ಯೋಗಸ್ಥ ಮಹಿಳೆ. ಆದರೆ ಬಹುಮಂದಿ ಮಹಿಳೆಯರು ಕೇವಲ ಕೆಲಸಗಾರರು. "ಎಂಥದ್ದೋ ಒಂದು ಕೆಲಸ, ಸಂಬಳ ಕೊಟ್ಟರೆ ಸಾಕು, ಈ ತುಟ್ಟಿಕಾಲದಲ್ಲಿ ಸಂಸಾರ ನಿಭಾಯಿಸಬೇಕಲ್ಲ," ಎಂಬ ಭಾವದವರು. ಇವರಿಗೆ ಉದ್ಯೋಗ ಆದರ್ಶವಲ್ಲ, ಕೇವಲ ಅನಿವಾರ್ಯ. ಇವರ ಸಮಸ್ಯೆಗಳು ಬಹಳಷ್ಟು ಕಡಿಮೆ. ಕಾರಣ, ಈಕೆ ತನ್ನ ಕೆಲಸವನ್ನು ಗಂಡ–ಮಕ್ಕಳ ಎದುರು ಕ್ಷುಲ್ಲಕವಾಗಿ ಕಾಣುತ್ತಾಳೆ. ಹದಿಬದೆಯ ಧರ್ಮವನ್ನು ಅರೆದು

ಪ್ರಿಯ ಸಂಗಾತಿ,

'ಸಂಗಾತಿ' ತಾಂತ್ರಿಕ ಕಾರಣಗಳಿಂದಾಗಿ ಈ ಎರಡನೆಯ ಸಂಚಿಕೆಯಿಂದ 'ಪ್ರಿಯ ಸಂಗಾತಿ'ಯಾಗಿದೆ. ನಿಮಗೆ ಇನ್ನೂ ಹತ್ತಿರವಾಗಬಯಸುತ್ತದೆ. ಮೊದಲನೆಯ ಸಂಚಿಕೆಯನ್ನು ಕುರಿತಂತೆ ಮುಖತಃ ಭೇಟಿಯಾದಾಗ ಮತ್ತು ಪತ್ರಗಳಲ್ಲಿ ಲೋಕರೂಢಿಯಾದ ಮೆಚ್ಚುಗೆಯನ್ನು ಸೂಚಿಸಿದ್ದೀರಿ. ಆದರೆ ಪತ್ರಿಕೆಯನ್ನು ಹೆಚ್ಚು ಅರ್ಥಪೂರ್ಣವಾಗಿಸುವುದಕ್ಕೆ ನಿಮ್ಮ ವಿಮರ್ಶಾತ್ಮಕ ಟೀಕೆ, ಟಿಪ್ಪಣಿಗಳು ಬೇಕು. ಇಂತಹ ಪ್ರತಿಕ್ರಿಯೆ ಹಾಗೂ ವಿಚಾರಪೂರ್ಣ ಲೇಖನ, ಕಥೆ, ಕವನಗಳನ್ನು ಸಂಗಾತಿಗಾಗಿ ಬರೆದು ಆರೋಗ್ಯಕರ ಸಂವಾದಕ್ಕೆ ನೆರವಾಗಿ.

ಕಳೆದೆರಡು ತಿಂಗಳಿಂದೀಚೆಗೆ ಗಂಡು-ಹೆಣ್ಣಿನ ಸಂಬಂಧವನ್ನು ಕುರಿತಂತೆ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ಎರಡು ಪ್ರತಿಭಟನಾ ಪ್ರದರ್ಶನಗಳು ನಡೆದಿವೆ: ಮೈಸೂರಿನ 'ಸಮತಾ', ಬೆಂಗಳೂರಿನ 'ಮಾನಿನಿ'ಯವರಿಂದ. ಶ್ರೀದೇವಿ, ರಾಜವರ್ಧನ್‌ರ ಪ್ರಕರಣಗಳ ವಿವರಗಳು ಈಗಾಗಲೇ ಪತ್ರಿಕೆಗಳಲ್ಲಿ ಸಾಕಷ್ಟು ಪ್ರಕಟವಾಗಿವೆ. ಈ ಪ್ರಸಂಗಗಳು ಕೆಲವೊಂದು ಮೂಲಭೂತ ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತವೆ. ಹೊರಬಂದಿರುವುದು ಈ ಎರಡು ಪ್ರಕರಣಗಳಾದರೂ ಸಭ್ಯತೆಯ ಮುಖವಾಡ ಧರಿಸಿರುವ ದೀಪಕ್, ರಾಜವರ್ಧನ್‌ರಂತಹ ಬೇಕಾದಷ್ಟು ಮಂದಿ ನಮ್ಮ ಸಮಾಜದಲ್ಲಿ ಇದ್ದಾರೆ. ಅವರೆಲ್ಲರ ಮುಖವಾಡಗಳನ್ನು ಕಿತ್ತೆಸೆಯಲು ಬೇಕಾದಂತಹ ಪ್ರಬಲ ಚಳುವಳಿ ನಮ್ಮಲ್ಲಿ ಇನ್ನೂ ಮೂಡಿಬಂದಿಲ್ಲ. ವೈವಿಧ್ಯತೆಯನ್ನು ಬಯಸುವ ಗಂಡಿಗೆ ಜೀವನದಲ್ಲಿ ಎಷ್ಟು ಹೆಣ್ಣು ಸಿಕ್ಕಿದರೂ ಸಾಲದೇನೋ! ಹೆಣ್ಣಿನ ಜೊತೆಗೆ ಹಣವೂ ಸಿಕ್ಕುತ್ತದೆಂದರೆ ಯಾರಿಗೆ ಬೇಡ? ಆಗ ಪ್ರೀತಿ, ಮೌಲ್ಯಗಳಿಗೆಲ್ಲಾ ತಿಲಾಂಜಲಿ! ಪುರುಷನ ಎಷ್ಟೋ ಆಸ್ತಿಯ ವ್ಯವಹಾರಗಳು ನಡೆದಿರುವಂತೆ ಹೆಣ್ಣಿನ ಬಗೆಗೂ ವ್ಯವಹಾರ ನಡೆದಿದೆ. ಹೆಚ್ಚು ಹೆಣ್ಣನ್ನು ಸಂಪಾದಿಸಿದಷ್ಟೂ ಅವನಿಗೆ ಹೆಚ್ಚು ಲಾಭ. ದೈಹಿಕ ಕಾಮನೆಗಳ ಪೂರೈಕೆಗೆ ಒಂದು; ಸಾಮಾಜಿಕ ಪ್ರತಿಷ್ಠೆಗೆ ಮತ್ತೊಂದು; ಬೌದ್ಧಿಕ ಸಾಹಚರ್ಯಕ್ಕೆ ಮಗದೊಂದು. ಕಟ್ಟಿಕೊಳ್ಳಲೊಂದು, ಇಟ್ಟುಕೊಳ್ಳಲು ಹಲವಾರು ಬೇಕೆನಿಸುವ ಇವರು ತಮ್ಮ ವಾದ ಸಮರ್ಥಿಸಿಕೊಳ್ಳಲು ಹೆಣ್ಣಿನ ಶೀಲದ ಬಗ್ಗೆ ಗೂಬೆ ಕೂರಿಸುವುದಕ್ಕೆ ಹಿಂಜರಿಯುವುದಿಲ್ಲ.

ಅಪ್ಪ, ಅಮ್ಮನ ಬೆಚ್ಚನೆಯ ರಕ್ಷಣೆಯಲ್ಲಿ ಬೆಳೆಯುವ ಹೆಣ್ಣು ಕೂಡ ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳದಿದ್ದರೆ ಈ ರೀತಿಯ ಬಲಿಪಶುವಾಗುತ್ತಾ ಹೋಗುವುದಕ್ಕೆ ಕೊನೆಯಿರುವುದಿಲ್ಲ. ತೊಟ್ಟ ಬಟ್ಟೆಯನ್ನು ಕಳಚಿ ಹಾಕುವಷ್ಟೇ ಸುಲಭವಾಗಿ ಹೆಣ್ಣನ್ನು ಉಪಯೋಗಿಸಿ ಎಸೆಯುವಂತಹ ಕುತ್ಸಿತ ಪ್ರವೃತ್ತಿಯ ವಿರುದ್ಧ ಪ್ರತಿಭಟನೆಯ ಅಲೆ ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಏಳಲೇಬೇಕು. ಇಷ್ಟೇ ಅಲ್ಲದೆ, ತಾನು ಬೇರೊಬ್ಬರ ಆಸ್ತಿಯಲ್ಲವೆಂಬ ರೀತಿಯಲ್ಲಿ, ಯಾರದೋ ಕೈಗೊಂಬೆಯಾಗದಂತೆ, ಬದುಕುವುದನ್ನು ನಮ್ಮ ಹೆಣ್ಣುಮಕ್ಕಳು ಕಲಿಯದ ಹೊರತು ಸಮರ್ಥವಾದ ಹೋರಾಟ ಸಾಧ್ಯವಾಗುವುದಿಲ್ಲ. ನಮ್ಮ ಹೋರಾಟವನ್ನು ಈ ಹಿನ್ನೆಲೆಯಲ್ಲಿ ರೂಪಿಸಿಕೊಳ್ಳುವುದು ಅಗತ್ಯ.

—ಎನ್. ಗಾಯತ್ರಿ

ಕುಡಿದ ಈಕೆಗೆ ಮನೆ, ಮಕ್ಕಳು ಮೊದಲ ಸ್ಥಾನ ; ಉದ್ಯೋಗ ಏನಿದ್ದರೂ ಎರಡನೆಯದು.

ಉದ್ಯೋಗಸ್ಥ ಮಹಿಳೆಯಾದರೂ ಆಕೆಗೆ ಗೃಹಕೃತ್ಯಗಳಿಂದ ರಿಯಾಯಿತಿ ನಿರೀಕ್ಷಿಸುವಂತಿಲ್ಲ. ಗಂಡ–ಹೆಂಡತಿ ಇಬ್ಬರೂ ಒಂಭತ್ತಕ್ಕೆ ಮನೆಯಿಂದ ಹೊರಡಬೇಕಾದರೂ ಹೆಂಡತಿ ಎದ್ದು ನೀರು ಹಿಡಿದು ಅಡಿಗೆ ಪ್ರಾರಂಭಿಸುತ್ತಾಳೆ. ಗಂಡ ಆರಾಮವಾಗಿ ಎದ್ದು ಪೇಪರ್ ಹಿಡಿದು ಕೂರುತ್ತಾನೆ. ನಮ್ಮ ಮೂಲಭೂತ ವಿದ್ಯಾಭ್ಯಾಸದ ವೈಖರಿಯೇ ಹಾಗಿದೆ. ಗಂಡು–ಹೆಣ್ಣಿನ ಕೆಲಸವನ್ನು, ಪಾತ್ರಗಳನ್ನು ಗೆರೆ ಎಳೆದಂತೆ ವಿಂಗಡಿಸಲಾಗಿದೆ. ನಮ್ಮ ಪಠ್ಯ ಪುಸ್ತಕಗಳಲ್ಲಿ ಕಮಲೆಗೆ ಅಡಿಗೆ, ಬಸವನಿಗೆ ತೋಟದ ಕೆಲಸ ಹಚ್ಚಿರುವುದು ಹಾಗಿರಲಿ, ಮನೆಯ ವಾತಾವರಣವೂ ಅದಕ್ಕೆ ಪೂರಕವಾಗಿಯೇ ಇರುತ್ತದೆ. ಎಳೆಯ ವಯಸ್ಸಿನ ಹುಡುಗಿಗೆ "ಸಾರು ಆಗಿದೆಯಾ ನೋಡೇ, ಕಾಫಿ ಮಾಡೆ, ಕಸ ಗುಡಿಸೇ" ಎಂದೆಲ್ಲ ಹೇರುತ್ತಾ ಹೋಗುವ ಮಾತಾ ಪಿತೃಗಳು ಗಂಡು ಹುಡುಗನಿಗೆ ಮಾತ್ರ–"ಚೆನ್ನಾಗಿ ಓದಿದ್ಯೇನೋ, ಸರಿಯಾಗಿ ಅಂಕ ತಗೋಬೇಕು, ಇಂಜಿನಿಯರಿಂಗ್ ಸೀಟ್ ತಗೋಬೇಕು," ಎಂದೆಲ್ಲಾ ಹುರಿದುಂಬಿಸುತ್ತಾರೆ. ಎಷ್ಟಾದರೂ 'ಆರತಿಗೊಬ್ಬ ಮಗಳು, ಕೀರುತಿಗೊಬ್ಬ ಮಗ' ಎಂದು ಸಾರಿವೆಯಲ್ಲ ಸರ್ಕಾರಿ ಜಾಹೀರಾತುಗಳು. ಇವೇ ಸಾಂಪ್ರದಾಯಿಕ ಮೌಲ್ಯಗಳನ್ನು ಹೊತ್ತು ಬೆಳೆದ ಗಂಡಿಗೆ ಮನೆಗೆಲಸ ಮಾಡುವುದು ತನ್ನ ಪುರುಷತ್ವಕ್ಕೆ ಕಡಿಮೆ ಎನ್ನುವ ಧಿಮಾಕು. ಸ್ವಲ್ಪ ವಿಚಾರವಂತ ಗಂಡು ಮದುವೆಯ ಹೊಸದರಲ್ಲಿ ಹೆಂಡತಿಗೇನಾದರೂ ಸಹಾಯ ಮಾಡಿಕೊಟ್ಟರೆ ಅತ್ತೆಯ ಉರಿ ಉರಿ ಕೊಂಕಿಗೆ ಗುರಿಯಾಗಬೇಕು. "ತಾನು ಮುದ್ದಿನಿಂದ ಕೂಡಿಸಿ ಮಾಡಿಹಾಕಿ ಬೆಳೆಸಿದ ಮಗ, ನಿನ್ನೆ ಮೊನ್ನೆ ಬಂದ ಹೆಣ್ಣಿಗೆ ಆಳಾಗಿಬಿಟ್ಟ" ಎಂದು ಗೋಳಿಡಬಹುದು. ಇಲ್ಲವೇ, ಸಮಾಜವೇ "ಒಳ್ಳೆ ಅಮ್ಮಾವ್ರ ಗಂಡ" ಎಂದು ಹೀಯಾಳಿಸಿ ಹಾಸ್ಯ ಮಾಡಬಹುದು. ಹೀಗಾಗಿ ಹೊಸತನದ ಎರಡು ದಿನದ ಸಂಭ್ರಮ ಮುಗಿದು ಆತ ತನ್ನ ಗಂಡೆಂಬ ಉತ್ಕೃಷ್ಟ ಶಿಖರದಲ್ಲಿ ಏರಿ ಕೂರುತ್ತಾನೆ. ಈಕೆ ಮದುವೆಯಾದೊಡನೆ ತನ್ನ ಹೆಸರನ್ನು ಕಿತ್ತೊಗೆದು, ಶ್ರೀಮತಿ....ಆಗಿ 'ರಾಯರ ಹೆಂಡತಿ' ಫಲಕವನ್ನು ಹಿರಿ ಹಿರಿ ಹಿಗ್ಗಿನಿಂದ ಧರಿಸುತ್ತಾಳೆ.

ಅರ್ಥ ಮಾಡಿಕೊಳ್ಳದ ಗಂಡ, ಬದಲಾಗದ ಅತ್ತೆಯೊಡನೆ ಹೊಂದಿ ಹೆಣಗಾಡುವಾಗಲೇ ಮಗುವಿನ ಆಗಮನ. ಆಕೆ ಓದು, ವಿದ್ಯಾಭ್ಯಾಸ, ಉದ್ಯೋಗದ ಯಾವುದೇ ಕ್ಲಿಷ್ಟ ಹಂತದಲ್ಲಿರಲಿ, ಮದುವೆಯಾದರೆ ತೀರಿತು ; ವರ್ಷದೊಳಗೊಂದು ಹೆತ್ತು ಕೊಡುವಂತೆ ಒತ್ತಡ. ಅಜ್ಜಿ ಆಗುವುದೇ ತನ್ನ ಜೀವನದ ಮಹತ್ತರ ಗುರಿ ಎಂದು ತಿಳಿದ ಅತ್ತೆಗೆ ಕಾಯುವ ಸಹನೆ ಇಲ್ಲ. ಗರ್ಭಾವಸ್ಥೆ, ಹೆರಿಗೆ, ಬಾಣಂತನಗಳು ಆಕೆಯನ್ನು ಕಟ್ಟಿಹಾಕುತ್ತವೆ. ಆಕೆ ಹೆರಿಗೆ ರಜೆಯಲ್ಲಿ ಹೋದಾಗ ಕಾರ್ಯರಂಗದಲ್ಲಿ ಬಹಳಷ್ಟು ಬದಲಾಗಿರುತ್ತವೆ. ಹಿಂತಿರುಗಿ ಬಂದ ಆಕೆ ಇತರರಿಗಿಂತ ಹಿಂದುಳಿಯಬಹುದು. ಒಂಭತ್ತು ತಿಂಗಳು ಹೊರುವುದು, ಹೆರುವುದೇನೋ ದೈಹಿಕ ಅನಿವಾರ್ಯತೆಗಳು, ನಿಜ. ಆದರೆ ತದನಂತರದ ಮಗುವಿನ ಪಾಲನೆಯ ಜವಾಬ್ದಾರಿ ಗಂಡ–ಹೆಂಡತಿ ಇಬ್ಬರಿಗೂ ಸೇರಿದ್ದಲ್ಲವೇ ? ಆದರೆ ಮಾತೃತ್ವವನ್ನು ವೈಭವೀಕರಿಸಿ, ಮಾತೆಯ ಸ್ವರೂಪವನ್ನು ಬಣ್ಣ ಬಣ್ಣಗಳಲ್ಲಿ ಚಿತ್ರಿಸಿ, ಅಂತೂ ಬಹಳ ನಯವಾಗಿ, ನಾಜೂಕಾಗಿ ಎಲ್ಲಾ ಚಾಕರಿಯನ್ನು ಅವಳ ತಲೆಗೇ ಕಟ್ಟಿರುವ ಗಂಡಿನ ಚಾತುರ್ಯ ಮೆಚ್ಚಬೇಕು ! ಮಗುವಿಗೆ ತಂದೆಯ ಅವಶ್ಯಕತೆ ತಾಯಿಯಷ್ಟೇ ಇರುತ್ತದೆ. ತಂದೆಯೂ ತಾಯಿಯಷ್ಟೇ ಮಗುವಿನ ಹತ್ತಿರವಿದ್ದು ತನ್ನ ಸಮಯ, ಸಹನೆ ನೀಡಿದರೆ ಮಗು ಅಷ್ಟೇ ಆರೋಗ್ಯಪೂರ್ಣವಾಗಿ ಬೆಳೆಯುತ್ತದೆ. ಅಂದರೆ ತಾಯಿಯಾದ ಕೂಡಲೆ ಬೇರೆ ಎಲ್ಲ ಪಾತ್ರಗಳೂ ಗೌಣ ಎಂಬ ಭ್ರಮೆಯಿಂದ ಉದ್ಯೋಗಸ್ಥ ಮಹಿಳೆ ಮೊದಲು ಪಾರಾಗ

> ಸಮಕಾಲೀನ ಉದ್ಯೋಗಸ್ಥ ಮಹಿಳೆ ನಮ್ಮ ಸಮಾಜಕ್ಕೆ ಕೌತುಕದ ವ್ಯಕ್ತಿ. ಇಂದಿಗೂ ಉದ್ಯೋಗಸ್ಥ ಮಹಿಳೆ ಅಲ್ಪಸಂಖ್ಯಾತಳಾಗಿಯೇ ಉಳಿದಿದ್ದಾಳೆ. ಇವರ ಸಂಖ್ಯೆ ದಿನೇ ದಿನೇ ಏರುತ್ತಿರುವುದು ಸಂತೋಷದ ವಿಷಯವಾದರೂ, ಇವಳನ್ನು ಅರ್ಥ ಮಾಡಿಕೊಳ್ಳಬೇಕಾದ ಪರಿಸರ ಬಹಳಷ್ಟು ಪರಿವರ್ತನೆ ಕಾಣಬೇಕಾಗಿದೆ.

ಮುಸ್ಲಿಂ ಹೆಣ್ಣಿನ ನೋವು-ನಲಿವುಗಳ ದನಿ-ಸಾರಾ ಅಬೂಬಕ್ಕರ್

'ಲಂಕೇಶ್ ಪತ್ರಿಕೆ'ಯಲ್ಲಿ ಸಾರಾ ಅಬೂಬಕ್ಕರ್‌ರವರು ಬರೆದ ಧಾರಾವಾಹಿ ಕಥೆ, ಲೇಖನಗಳನ್ನು ಓದುತ್ತಿದ್ದಾಗ ಯಾರೋ ಹೊಸ ಲೇಖಕಿಯೊಬ್ಬರು ಬೆಳಕಿಗೆ ಬರುತ್ತಿದ್ದಾರೆ–ಎಂದು ಕೊಳ್ಳುತ್ತಿದ್ದೆ. ಸಾರಾ ಅವರ 'ಚಂದ್ರಗಿರಿಯ ತೀರದಲ್ಲಿ ಕಿರುಕಾದಂಬರಿ ಪುಸ್ತಕ ರೂಪದಲ್ಲಿ ಬಂದಾಗ, ಅದನ್ನು ಇಡಿಯಾಗಿ ಓದಿದ ನಂತರ ಸಹಜವಾಗಿಯೇ ಮೂಗಿನ ಮೇಲೆ ಬೆರಳಿಡುವಂತಾಯಿತು. ಸಮಾಜದ ಕ್ರೂರ ಪದ್ಧತಿಗೆ ಸಿಲುಕಿದ ಮುಸ್ಲಿಂ ಹೆಣ್ಣಿನ ಮನಸ್ಸಿನ ಆಂದೋಲನವನ್ನು ಸರಳವಾಗಿ, ಯಾವುದೇ ಆವೇಶವಿಲ್ಲದೆ ಕತೆಗಾರ್ತಿ ಚಿತ್ರಿಸಿದ್ದಾರೆ. ಆ ಪುಸ್ತಕದ ಕಡೆಯಲ್ಲಿನ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಓದಿದ ನಂತರವಂತೂ ಮಧ್ಯವಯಸ್ಸನ್ನು ದಾಟಿರುವ ಈ ಲೇಖಕಿ ಇಷ್ಟು ದಿನ ಏಕೆ ಏನನ್ನೂ ಬರೆದಿರಲಿಲ್ಲ ಎಂಬ ಆಶ್ಚರ್ಯ ನನಗಾಯಿತು.

ಪುತ್ತೂರಿನಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಆಶ್ರಯದಲ್ಲಿ ನಡೆದ ಸಭೆಯಲ್ಲಿ ಸಾರಾ ಅವರ ಮೇಲೆ ಮತಾಂಧರು ನಡೆಸಿದ ಹಲ್ಲೆಯ ಪ್ರಕರಣದಿಂದಾಗಿ ಹೆಚ್ಚು ಜನಗಳಿಗೆ ಅವರು ಪರಿಚಯವಾದರು. ಈ ಅಮಾನವೀಯ ಘಟನೆಯಿಂದ ಸಾರಾ ಅವರು ಜನಪ್ರಿಯರಾಗಬೇಕಾದ ಅವಶ್ಯಕತೆಯಿರಲಿಲ್ಲ. ಮುಂದೆ ಅವರ ಕೃತಿಗಳ ಮೂಲಕವಾದರೂ ಜನಪ್ರಿಯರಾಗುತ್ತಿದ್ದರು. ಬೆಂಗಳೂರಿನಲ್ಲಿ ನಡೆದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ ಭಾಗವಹಿಸಲು ಬಂದಿದ್ದ ಸಾರಾ ಅವರನ್ನು ಭೇಟಿಯಾಗಿ, ಅವರನ್ನು ಸಂದರ್ಶನ ಮಾಡಬೇಕೆಂದಿರುವ ವಿಷಯವನ್ನು ಹೇಳಿದಾಗ, ಸಂಕೋಚದಿಂದ, ಕೊಂಚ ಬೇಸರದಿಂದ "ಅಯ್ಯೋ! ನನಗೆ ಈ ಸಂದರ್ಶನಗಳು ಸಾಕುಸಾಕಾಗಿವೆ. ಏನಂತ ನನ್ನನ್ನು ಸಂದರ್ಶಿಸಬೇಕು ?' ಇವೆಲ್ಲಾ ನನಗೆ ಬೇಡವಾಗಿದೆ." ಎಂದರು. ನಂತರ, ನಮ್ಮದು ಮಹಿಳಾ ಪತ್ರಿಕೆಯೆಂದೊಡನೆ ಒಪ್ಪಿಕೊಂಡರು. ಬೆಂಗಳೂರಿನಲ್ಲಿದ್ದಷ್ಟು ಕಾಲವೂ ಸಾರಾ ಅವರಿಗೆ ಬಿಡುವಿಲ್ಲದಷ್ಟು ಕಾರ್ಯಕ್ರಮ. ಅವರನ್ನು ಸಂದರ್ಶಿಸಲು ಒಂದು ಕ್ಯೂ



ಸಂದರ್ಶನ: **ಎನ್. ಗಾಯತ್ರಿ**

ನಿಂತಿರುತ್ತಿತ್ತು. 'ಸಂಗಾತಿ'ಗೆ ಅವರು ನೀಡಿದ ಹತ್ತು ನಿಮಿಷಗಳ ಚುಟುಕು ಸಂದರ್ಶನದ ಸಂಗ್ರಹ ಇದು.

ಪ್ರ: ಕೆಲವೇ ಕೃತಿಗಳ ರಚನೆಯಿಂದಷ್ಟೇ ನಿಮಗೆ ದೊರಕಿರುವ ದಿಢೀರ್ ಜನಪ್ರಿಯತೆಯ ಬಗ್ಗೆ ನಿಮಗೇನನಿಸುತ್ತದೆ ?

ಸಾರಾ: ನನಗೆ ಈ ಜನಪ್ರಿಯತೆ ಬೇಕಿಲ್ಲ. ನನ್ನ ಮನಸ್ಸಿನಲ್ಲಿ ಇನ್ನು ಮೂರು ನಾಲ್ಕು ಕೃತಿಗಳನ್ನು ರಚಿಸಬೇಕೆಂದಿದೆ. ಅಷ್ಟರಲ್ಲೇ ಈ ರೀತಿ ಸುದ್ದಿಯಾಗುವುದು ಬೇಡವಾಗಿತ್ತು.

ಪ್ರ: ಈ ರೀತಿ ಲೇಖಕಿಯರಿಗೆ ಪ್ರತ್ಯೇಕ ಸಾಹಿತ್ಯ ಸಮ್ಮೇಳನಗಳು ನಿಮಗೆ ಅವಶ್ಯಕ ಎಂದೆನಿಸುತ್ತದೆಯೇ ?

ಸಾರಾ: ಹೌದು. ಮಹಿಳೆಯರು ನಾವು ನಾವೇ ಇದ್ದರೆ ಹೆಚ್ಚು ನಿಸ್ಸಂಕೋಚವಾಗಿ ನಮ್ಮ

ಬೇಕು. ಮಗುವಿನ ಚಿಂತನೆಯಲ್ಲಿ ಸದಾ ನಿರತರಾಗಿರುವ ಹಾಗೂ ಅದರ ಪೂರ್ಣ ಜವಾಬ್ದಾರಿ ತನ್ನದೇ ಎಂದು ಎಲ್ಲಾ ಭಾರ ಹೊರುವ ಮನೋಭಾವ ಮಹಿಳೆಯರಲ್ಲಿ ಹೋಗಬೇಕು. ಸಾಮಾನ್ಯ ಅನಿಸಿಕೆಗೆ ವಿರೋಧವಾಗಿ ಉದ್ಯೋಗಸ್ಥ ತಾಯಂದಿರ ಮಕ್ಕಳು ಒಂದು ರೀತಿ ಸ್ವತಂತ್ರ ಮನೋಭಾವದಿಂದ ಬೆಳೆಯುವುದಲ್ಲದೆ, ಸರಿಯಾದ ರೀತಿಯಲ್ಲಿ ತರಪೇತು ಕೊಟ್ಟಲ್ಲಿ ತಾಯಿಯ ಕೆಲಸವನ್ನು ಗೌರವ, ಹೆಮ್ಮೆಯಿಂದ ಕಾಣುತ್ತಾರೆ. ಇನ್ನು ನಮ್ಮಲ್ಲಿ 'ಬೇಬಿ ಸಿಟಿಂಗ್' ಮಕ್ಕಳ ಕ್ರೆಷ್ ವ್ಯವಸ್ಥೆ ಅಷ್ಟಾಗಿ ಇಲ್ಲ. ಮನೆಯಲ್ಲೇ ಹಿರಿಯರಿಲ್ಲದಾಗ ಹೆಣ್ಣು ಕೆಲಸವನ್ನೇ ಬಿಟ್ಟು ಮಗುವಿಗಾಗಿ ಮನೆಯಲ್ಲೇ ಕೂರುತ್ತಾಳೆ. ಹಾಗೊಮ್ಮೆ ಆಕೆ ಅಲ್ಲಿ, ಇಲ್ಲಿ ಮಗುವನ್ನು ಬಿಟ್ಟು ಹೋದರೆ, ಅದು ಅಕ್ಷಮ್ಯ ಅಪರಾಧ. ಮುಖ್ಯವಾಗಿ ಮಗುವಿನ ಬೆಳವಣಿಗೆಯಲ್ಲಿ ಗಂಡಿನ ಪಾತ್ರಕ್ಕೆ ಸಮಾನ ಒತ್ತು ನೀಡಬೇಕಾಗಿದೆ.

> ಮೇರಿ ಕ್ಯೂರಿ—ಪಿಯರ್ ಕ್ಯೂರಿ ದಂಪತಿಗಳನ್ನು ಇಲ್ಲಿ ನೆನೆಯಬೇಕು. ಹೆಂಡತಿಯ ಆಸಕ್ತಿಯಲ್ಲಿ ಸಮಭಾಗಿಯಾಗಿ ಹಗಲಿರುಳು ಜೊತೆಜೊತೆಗೆ ದುಡಿದು ಒಟ್ಟಿಗೇ ನೊಬೆಲ್ ಪಾರಿತೋಷಕ ಪಡೆದ ಆದರ್ಶ ದಂಪತಿಗಳು. ಆದರೆ ನಮ್ಮಲ್ಲಿ ಪಿಯರ್ ಕ್ಯೂರಿಗಳ ಅಭಾವ !

ಇಷ್ಟೆಲ್ಲ ಸಾಂಸಾರಿಕ ಅಡಚಣೆಗಳಲ್ಲೂ ಆಕೆ ಯಶಸ್ವಿಯಾದರೆ ಆಗಲೇ ಪ್ರಾರಂಭ ಪತಿರಾಯರ ಹೊಟ್ಟೆಯಲ್ಲಿ ಚಿಟ್ಟೆಗಳ ಹಾರಾಟ. ಅಸೂಯೆ, ಅಭದ್ರತೆಯ ಭಾವ. ಇನ್ನು 'ಇಂಥವರ ಗಂಡ' ಎಂಬಷ್ಟು ಹೆಣ್ಣು ಪ್ರತಿಭಾವಂತಳಾದರೆ ಆತನ ಸ್ವಾಭಿಮಾನಕ್ಕೆ ಮಹಾಪೆಟ್ಟು. ಉದ್ಯೋಗದಲ್ಲಿ ಯಶಸ್ವಿಯಾದ ಬಹಳಷ್ಟು ಮಹಿಳೆಯರ ದಾಂಪತ್ಯ ದುರಂತಕ್ಕೆ ಮುಖ್ಯ ಕಾರಣ ಗಂಡಿನ ಅಹಂಭಾವ, ಅಸಹಕಾರ, ದುರಭಿಮಾನ. ಸಮಾಜವೂ ಕೂಡ ಸಂಸಾರದ ಒಡಕಿಗೆ ಗಂಡನ್ನು ದೂರದೆ ಹೆಣ್ಣಿನ ಕೆಲಸವನ್ನೇ ದೂಷಿಸುತ್ತದೆ.

ಇಷ್ಟು ಆಕೆಯ ಸಾಂಸಾರಿಕ ತಾಪತ್ರಯಗಳಾದರೆ, ಔದ್ಯೋಗಿಕವಾಗಿಯೂ ಅವಳ ಸಮಸ್ಯೆಗಳು ಕಡಿಮೆ ಇಲ್ಲ. ಹೆಂಗಸರನ್ನು ಗುಮಾಸ್ತೆ, ಟೈಪಿಸ್ಟ್, ಉಪಾಧ್ಯಾಯಿನಿ—ಈ ಪಾತ್ರಗಳಲ್ಲಿ ಸಮಾಜ ಸ್ವೀಕರಿಸಿಬಿಟ್ಟಿದೆ. ಆದರೆ ಗಂಡಸರದೇ ಸಾಮ್ರಾಜ್ಯವಾಗಿದ್ದ ಪೋಲೀಸ್ ವೃತ್ತಿ, ಇಂಜನಿಯರಿಂಗ್, ಪತ್ರಿಕೋದ್ಯಮ, ಲಾಯರ್‌ಗಿರಿ, ವಿಮಾನ ಹಾರಾಟ—ಈ ರಂಗಗಳಲ್ಲಿ ಅವಳ ಸಾಮರ್ಥ್ಯವನ್ನು ಇನ್ನೂ ಅನುಮಾನಾಸ್ಪದವಾಗಿ ನೋಡುತ್ತಾ, ಅಲ್ಪ ಅವಕಾಶ ಸಿಕ್ಕರೂ "ಇವೆಲ್ಲ ಹೆಂಗಸರು ಮಾಡೋ ಕೆಲಸ ಅಲ್ಲಮ್ಮಾ" ಎಂದು ತುಳಿಯಲು ನೋಡುತ್ತಾರೆ.

ಮೇಲ್ಕಂಡ ಉದ್ಯೋಗಗಳು ಒಂದು ರೀತಿ ಗೌರವಾನ್ವಿತ ಪಟ್ಟ ಪಡೆದಿವೆ. ಆದರೆ ಕೆಲವು ಕೆಲಸಗಳನ್ನು ಜನ ಕಾಮಾಲೆ ಕಣ್ಣಿನಿಂದಲೇ ನೋಡುತ್ತಾರೆ. ಸೆಕ್ರೆಟರಿ ಎಂದರೆ ಮೋಟುಲಂಗ ತೊಟ್ಟು, ಟೈಪ್ ಕುಟ್ಟಿ, ಬಾಸ್‌ಗೆ ಕಾಫಿ ಸುರಿದುಕೊಡೋ ಹೆಣ್ಣೆಂಬ ಕಲ್ಪನೆ. ದಾದಿಯಾದರಂತೂ ಏನೆಲ್ಲ ಬಾಚಬೇಕಾದವರು ! ಡಾಕ್ಟರ್—ದಾದಿಯರ ರಂಗು ರಂಗಿನ ಕತೆಗಳು. ಗಗನ ಸಖಿಯಾದರೆ ತಿಂಡಿ ಪಾನೀಯ ನೀಡುವ ಅಲಂಕೃತ ಪರಿಚಾರಕರೆಂಬ ತಾತ್ಸಾರ! ಪ್ರತಿ ಕೆಲಸದ ಹಿಂದಿನ ವಾಸ್ತವ ನೋಟ, ಜವಾಬ್ದಾರಿ, ಶ್ರಮ, ಸೇವೆಯ ಮನೋಭಾವ ಇವರಿಗೆ ಅರ್ಥವಾಗುವುದಿಲ್ಲ.

ಉದ್ಯೋಗಸ್ಥ ಹೆಣ್ಣಿನ ಈ ಸ್ಥಿತಿಗೆ ಅವಳೂ ಬಹಳಷ್ಟು ಕಾರಣ. ತನ್ನ ಹಕ್ಕುಗಳನ್ನು ಒತ್ತಿ ಹೇಳದೆ, ಎಲ್ಲ ಹೊರೆಯನ್ನೂ ಸಹನೆ, ಸಂಯಮಗಳಿಂದ ಹೊತ್ತು, ಅದೇ ಸೀತೆ—ಸಾವಿತ್ರಿಯರ ಸವೆದ ಶಿಥಿಲ ಹಾದಿ ಹಿಡಿದಿದ್ದಾಳೆ. ಸಹನೆ, ಸಂಯಮವೂ ಒಂದು ಪರಿಮಿತಿಯ ನಂತರ ಹೇಡಿತನವಾಗುತ್ತದೆ. ಅಸಹಾಯಕತೆಗೆ ಆದರ್ಶ ಲೇಪಿಸಿ ಅನುಭವಿಸೋದು ನಿಲ್ಲಬೇಕು. ಮುಖ್ಯವಾಗಿ ನಾವು ಮಾನಸಿಕವಾಗಿ ಬೆಳೆಯಬೇಕಾಗಿದೆ, ಗಟ್ಟಿಯಾಗಬೇಕಾಗಿದೆ. ನಮ್ಮ ಕನಸುಗಳನ್ನು ಯಾರದೋ ದುರ್ಬಲ ಹೆಗಲುಗಳ ಮೇಲೆ ಹೇರುವ ಬದಲು ಅದಕ್ಕಾಗಿ ದುಡಿಯಲು ತಯಾರಾಗಬೇಕಾಗಿದೆ.

[ಮಾರ್ಚ್ 16 ರಂದು ನಡೆದ ಲೇಖಕಿಯರ ರಾಜ್ಯಮಟ್ಟದ ಪ್ರಥಮ ಸಮ್ಮೇಳನದಲ್ಲಿ ಓದಿದ ಲೇಖನದ ಸಂಕ್ಷಿಪ್ತರೂಪ.]

ಸಾಹಿತ್ಯಕೃತಿಗಳನ್ನೆ ಚರ್ಚಿಸಿಕೊಳ್ಳುತ್ತೇವೆ. ಸಾಮಾನ್ಯ ಸಾಹಿತ್ಯ ವೇದಿಕೆಯಲ್ಲಿ ಪುರುಷರ ಕೃತಿಗಳೇ ಮೇಲುಗೈಯಾಗಿ ನಮ್ಮದು ಕೆಳಕ್ಕೆ ಹೋಗಬಹುದು. ಆದ್ದರಿಂದ ನಾವು ಪುರುಷರ ಸಮಾನವಾಗಿ ಬರೆಯುವವರೆಗೂ ನಮಗೆ ಪ್ರತ್ಯೇಕ ಸಮ್ಮೇಳನ ಬೇಕು.

ಪ್ರ : ಮತೀಯ ಶಾಸನಗಳು ಬದಲಾಗಬೇಕು ಎನ್ನುವುದನ್ನು ನೀವು ಒಪ್ಪುತ್ತೀರಾ? ಹೆಚ್ಚು ಕೊರತೆಗಳನ್ನು ಹೊಂದಿರುವ ಮುಸ್ಲಿಂ ಕಾನೂನಿನಲ್ಲಿ ಬದಲಾವಣೆ ತರುವ ಪ್ರಯತ್ನದಲ್ಲಿ ಅನ್ಯಧರ್ಮೀಯರ ಪಾತ್ರ ಏನಾಗಿರಬೇಕು?

ಸಾರಾ : ಹೌದು. ಮತೀಯ ಶಾಸನಗಳು ಬದಲಾಗಬೇಕು. ಮುಸ್ಲಿಂ ವೈಯುಕ್ತಿಕ ಕಾನೂನಿನಲ್ಲಿರುವ ಕೊರತೆಗಳಿಂದ ಮಹಿಳೆಗೆ ತುಂಬಾ ಅನ್ಯಾಯವಾಗಿದೆ. ಈ ಚಳುವಳಿ ನಮ್ಮಿಂದಲೇ ಬರಬೇಕು. ನಮ್ಮ ಮುಸ್ಲಿಂ ಮಹಿಳೆಯರು ಮತ್ತು ಪುರುಷರು ಎಚ್ಚೆತ್ತುಗೊಂಡು ಈ ಚಳುವಳಿಯ ಮುಂಚೂಣಿಯಲ್ಲಿರಬೇಕು. ಅನ್ಯಧರ್ಮೀಯರೇ ನೇತೃತ್ವ ವಹಿಸಿದರೆ ಅವರಿಗೂ, ನಮಗೂ ತೊಂದರೆಯಾಗಬಹುದು. ನಮ್ಮವರು ನೇತೃತ್ವ ವಹಿಸಿದ ನಂತರ ಬೇರೆಯವರು ಬಂದು ಇದರಲ್ಲಿ ಸೇರಬಹುದು.

ಈಗ ನಮ್ಮಲ್ಲೂ ಅಲ್ಲೊಬ್ಬರು, ಇಲ್ಲೊಬ್ಬರು ಎಚ್ಚರಗೊಳ್ಳುತ್ತಿದ್ದಾರೆ. ಈಗ ಷಹನಾಜ್ ಷೇಖ್ ಸುಪ್ರೀಂಕೋರ್ಟಿಗೆ ಹೋಗಿದ್ದಾರೆ. ಇನ್ನೂ ಹೆಚ್ಚುಸಂಖ್ಯೆಯಲ್ಲಿ ನಮ್ಮ ಮುಸ್ಲಿಂ ಮಹಿಳೆಯರು ಎಚ್ಚೆತ್ತರೆ ಆಗ ನಮ್ಮ ಕಾನೂನಿನಲ್ಲಿ ಬದಲಾವಣೆ ತರಲು ಸಾಧ್ಯವಾಗಬಹುದು.

ಪ್ರ : ಮುಸ್ಲಿಂ ಮಹಿಳೆಯರ ಸ್ಥಾನಮಾನ ಬದಲಾವಣೆಗೆ ಅವರ ಆರ್ಥಿಕ ಸ್ವಾತಂತ್ರ್ಯವೇನಾದರೂ ನೆರವಾಗುತ್ತದೆಯೇ?

ಸಾರಾ : ಖಂಡಿತವಾಗಿ. ದುಡಿಯುವ ಮಹಿಳೆಗೆ ಹೆಚ್ಚು ಸ್ವಾತಂತ್ರ್ಯವಿರುತ್ತದೆ. ಗಂಡ ಅವಳಿಗೆ ತಲಾಖ್ ಕೊಟ್ಟರೂ ತಕ್ಷಣ ತನ್ನ ಅನ್ನಕ್ಕೆ ತೊಂದರೆಯಾಗಲ್ಲ. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಹುಡುಗಿಗೆ ತಲಾಖ್ ನಂತರವೂ ಮರುಮದುವೆ ಅಷ್ಟು ಕಷ್ಟವಾಗದು.

ಪ್ರ : ನಿಮ್ಮ ಬರವಣಿಗೆಯ ಮೂಲಕವಲ್ಲದೆ ಮುಸ್ಲಿಂ ಮಹಿಳೆಯರ ಕಲ್ಯಾಣಕ್ಕೆ ಯಾವ ರೀತಿಯ ಪ್ರಯತ್ನ ಮಾಡಲು ಸಿದ್ಧರಿದ್ದೀರಾ?

ಸಾರಾ : ನಾನೇನು ಮಾಡಲು ಸಾಧ್ಯ? ಬರೆಯುತ್ತೇನೆ. ಅಷ್ಟೇ ಅಲ್ಲ, ಮುಸ್ಲಿಂ ಮಹಿಳೆಯರ ಕಲ್ಯಾಣಕ್ಕಾಗಿ ಯಾರಾದರೂ ಮುಂದೆ ಬಂದು ಸಂಘ ಕಟ್ಟುವುದೇ ಆದರೆ, ಅವರಿಗೆ ಎಲ್ಲ ರೀತಿಯ ನೆರವು ನೀಡಲು ಬಯಸುತ್ತೇನೆ.

> ದುಡಿಯುವ ಮಹಿಳೆಗೆ ಹೆಚ್ಚು ಸ್ವಾತಂತ್ರ್ಯವಿರುತ್ತದೆ. ಗಂಡ ತಲಾಖ್‌ಕೊಟ್ಟರು ತಕ್ಷಣ ತನ್ನ ಅನ್ನಕ್ಕೆ ತೊಂದರೆಯಾಗುವುದಿಲ್ಲ. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಹುಡುಗಿಗೆ ಮರುಮದುವೆ ಅಷ್ಟು ಕಷ್ಟವಾಗದು.

ಮಾತು ಪ್ರಾರಂಭಿಸುವವರೆಗೂ ಸಂಕೋಚದ ಮುದ್ದೆಯಂತೆ ತೋರಿದ ಶ್ರೀಮತಿ ಸಾರಾ, ಒಮ್ಮೆ ಮಾತನಾಡಲು ಪ್ರಾರಂಭಿಸಿದ ನಂತರ ಖಚಿತವಾಗಿ, ಆತ್ಮವಿಶ್ವಾಸದಿಂದ ತಮ್ಮ ಅಭಿಪ್ರಾಯ ಮಂಡಿಸಿದರು. ಅವರ ಕಥೆ ಕಾದಂಬರಿಗಳಷ್ಟೇ ಅಲ್ಲದೆ, ಇತ್ತೀಚೆಗಿನ ಅವರ ಲೇಖನಗಳನ್ನು ಗಮನಿಸಿದಾಗ ಸಾರಾ ಅಬೂಬಕ್ಕರ್‌ರವರು ಅತ್ಯಂತ ಭರವಸೆ ಹುಟ್ಟಿಸುವ ಲೇಖಕಿಯಾಗಿ ಬೆಳೆಯುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಮುಸ್ಲಿಂ ಹೆಣ್ಣಿನ ನೋವಿನ ಹಲವು ಮುಖಗಳನ್ನು ಚಿತ್ರಿಸಿರುವ ಸಾರಾ ಇಂದು ಮುಸ್ಲಿಂ ಹೆಣ್ಣಿನ ಆಸೆ ಆಕಾಂಕ್ಷೆಗಳ, ನೋವು ನಲಿವುಗಳ ದನಿಯಾಗಿದ್ದಾರೆ.

‘ಕನ್ಯತ್ವ’ಕ್ಕೆ ಪರದಾಟ

“ಮೊದಲ ರಾತ್ರಿಯಲ್ಲಿ ಕನ್ಯಾಪೊರೆ ಹರಿದು ರಕ್ತ ಸ್ರಾವವಾಗಿಲ್ಲವೆಂದು ಕಂಡು ಬಂದರೆ, ಗಂಡ ಹೆಂಡತಿಯ ಕೈಬಿಡುವ ಸಾಧ್ಯತೆ ಇದೆ. ಆದ್ದರಿಂದ ಕನ್ಯಾಪೊರೆಯಿಲ್ಲದ ಯುವತಿಯರಲ್ಲಿ ಮತ್ತೆ ಆ ಪೊರೆಯನ್ನು ಜೋಡಿಸಿ ಅವಳ ಪಾವಿತ್ರ್ಯವನ್ನು ಪುನಃ ತಂದು ಕೊಡುವಲ್ಲಿ ಮುಂಬಯಿ ವೈದ್ಯರು ಯಶಸ್ವಿಯಾಗಿದ್ದಾರೆ” ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿ ಪ್ರಜ್ಞಾವಂತರಿಗೆ ದಿಗ್ಭ್ರಮೆ ಹುಟ್ಟಿಸುವಂಥದು.

ಇಲ್ಲಿ ಕೆಲವು ಮೂಲಭೂತ ಪ್ರಶ್ನೆಗಳ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಕನ್ಯಾಪೊರೆ ಎಂದರೇನು ? ಇದರ ಪಾವಿತ್ರ್ಯ ಎಷ್ಟು ಮಟ್ಟಿನದು ? ಇಂಥ ಗುಣ ಸೃಷ್ಟಿಸುವುದರ ಹಿಂದೆ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವಿಲ್ಲವೆ ? ಇದನ್ನು ಎದುರಿಸುವುದು ಹೇಗೆ ?

ವೈದ್ಯಕೀಯ ಶಾಸ್ತ್ರದಲ್ಲಿ ‘ಕನ್ಯಾಪೊರೆ’ ಎಂಬುದರ ಉಲ್ಲೇಖ ಎಲ್ಲೂ ಇಲ್ಲ. ವಾಸ್ತವವಾಗಿ ಹೆಣ್ಣಿನ ಯೋನಿಯನ್ನು ಮುಚ್ಚಿರುವ ತೆಳುಪೊರೆಗೆ ‘ಯೋನಿ ಪಟಲ’ ಎಂಬ ಹೆಸರಿದೆ. ಈ ಪಟಲ ಸುಮಾರು ¼ ಸೆಂ. ಮೀ. ದಪ್ಪದ್ದು. ಇದರ ಮಧ್ಯಭಾಗದಲ್ಲಿ ಒಂದು ಅಥವಾ ಹಲವು ರಂಧ್ರಗಳಿರುತ್ತವೆ. ಮುಟ್ಟಿನ ಸ್ರಾವ ಹೊರಬರಲು ಈ ರಂಧ್ರಗಳು ಅತ್ಯಾವಶ್ಯಕ. ರಂಧ್ರದ ವ್ಯಾಸ ಒಂದು ಬೆರಳು ತೂರಿಸುವಷ್ಟು. ಕೆಲವರಲ್ಲಿ ಇನ್ನೂ ದೊಡ್ಡದಿರಬಹುದು. ಹೆಣ್ಣುಮಗು ಹುಟ್ಟಿದಾಗ ಈ ಪೊರೆ ಪೂರ್ಣಸ್ಥಿತಿಯಲ್ಲಿರಬಹುದು. ಆದರೆ ಆಕೆ ಬೆಳೆಯುತ್ತಾ, ದೈನಂದಿನ ಕೆಲಸಗಳಲ್ಲಿ ಪಾಲುಗೊಂಡಾಗ ಈ ತೆಳುಪೊರೆ ಶಿಥಿಲವಾಗುತ್ತದೆ. ಉದಾಹರಣೆಗೆ ಅವಳು ಭಾರವಾದ ಬಿಂದಿಗೆ–ಬಕೀಟುಗಳನ್ನು ಎತ್ತುವುದು, ಕುಟ್ಟುವುದು, ರುಬ್ಬುವುದು, ಓಡುವುದು, ಅಂಗಸಾಧನೆ ಮಾಡುವುದು, ಈಜುವುದು, ಸೈಕಲ್ ಸವಾರಿ ಮಾಡುವುದು, ಹೊಲಿಗೆಯಂತ್ರ ತುಳಿಯುವುದು ಮುಂತಾದ ಕೆಲಸ ಮಾಡಿದಾಗ ಪೊರೆಗೆ ಆಘಾತವಾಗುತ್ತದೆ. ಆದ್ದರಿಂದ ಶೇಕಡಾ 90 ಹುಡುಗಿಯರಲ್ಲಿ ಈ ಪೊರೆ ಹರಿದಿರುತ್ತದೆ. ಸಂಭೋಗ ಸಮಯದಲ್ಲಿ ಪೊರೆ ಇನ್ನಷ್ಟು ಹರಿಯಬಹುದು. ಆಗ ಸ್ವಲ್ಪ ರಕ್ತ ಸ್ರಾವವಾಗಬಹುದು. ಆಗದೆಯೂ ಇರಬಹುದು. ರಕ್ತ ಸ್ರಾವ ಆಗಲಿಲ್ಲೆಂದು ಅವಳು ಕನ್ಯೆಯಲ್ಲ ಎಂದು ಹೇಳುವುದು ಕೂಡ ತಪ್ಪಾಗುತ್ತದೆ.

ಹುಡುಗಿಗೆ ಮಾತ್ರ ಪಾವಿತ್ರ್ಯದ ಪ್ರಶ್ನೆಯೆ? ಗಂಡಿನ ಪಾವಿತ್ರ್ಯವನ್ನು ಪರೀಕ್ಷಿಸಲು ಯಾವ ವಿಧಾನವಿದೆ ? ಕನ್ಯೆಯ ಪಾವಿತ್ರ್ಯ ಬೇಕೆನ್ನುವವರು ಗಂಡಿನ ಪಾವಿತ್ರ್ಯದ ಬಗೆಗೂ ರುಜುವಾತು ನೀಡಬೇಕಾಗುತ್ತದೆ ಎಂಬುದನ್ನು ಮರೆಯಬಾರದು. ಈ ಕೆಲಸ ಆಗದಿದ್ದ ಪಕ್ಷದಲ್ಲಿ ಹೆಣ್ಣಿನದನ್ನು ಕೇಳುವ ಅಧಿಕಾರವೂ ಅವರಿಗಿಲ್ಲ.

ಡಾ|| ಅನುಪಮಾ ನಿರಂಜನ

ಚಾರಿತ್ರಿಕವಾಗಿ ಹೆಣ್ಣು ‘ಆಸ್ತಿ’ ಎಂದು ಪರಿಗಣಿತವಾದ ಹಂತದಲ್ಲಿ ಇಂಥ ಕನ್ಯತ್ವದ ಕಲ್ಪನೆ ಇದ್ದಿರಬಹುದು. ಇದು ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗಾದ ಶೋಷಣೆಯ ಸಂಕೇತವೂ ಹೌದು. ಅವಳಿಗೆ ಬದುಕಿನಲ್ಲಿ ಬೇರೇನೂ ಉದ್ದೇಶವಿಲ್ಲ, ಗಂಡನಿಗಾಗಿ ಯೋನಿ ಪೊರೆಯನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳುವುದರ ಹೊರತು. ಇಷ್ಟು ತ್ಯಾಗದ ಮೂಲ ಆಶಯ, ಒಂದು ರಾತ್ರಿಯಲ್ಲಿ ಗಂಡ ಯೋನಿ ಪೊರೆಯನ್ನು ತಾನಾಗಿಯೇ ಹರಿಯಲು ಅವಕಾಶಮಾಡಿಕೊಡುವುದು. ಈ ಒಂದು ಕ್ರಿಯೆಗಾಗಿ ಇಡೀ ಬಾಲ್ಯಾವಸ್ಥೆ ಮತ್ತು ಹದಿಹರೆಯಯನ್ನೆಲ್ಲ ಹುಡುಗಿ ಯಾವ ಚಟುವಟಿಕೆಯೂ ಇಲ್ಲದೆ ಸುಮ್ಮನೆ ಕೂಡಬೇಕೆಂದು ನಿರೀಕ್ಷಿಸುವುದು ಕೂಡ ಎಂಥ ಕ್ರೌರ್ಯ !

ಅಭಿಮಾನ

ಕಥೆ

● ಗೌರಿ

'ಏನು........ಏನದು ?'

'ಸ್ಪೆಷಲ್ ಬೈಗಳಾ....?'

ಯಾರ ಪ್ರಶ್ನೆಗೂ ಉತ್ತರಿಸದೆ ಸಂಧ್ಯಾ ತನ್ನ ಸ್ಥಳದಲ್ಲಿ ಹೋಗಿ ಕೂತಳು. ತನಗಾದ ಸಂತೋಷವನ್ನು ಅರಗಿಸಿ ಕೊಂಡು ಸಹಜ ಸ್ಥಿತಿಗೆ ಬರಲು ಅವಳಿಗೆ ಕೆಲವು ನಿಮಿಷಗಳೇ ಬೇಕಾದವು. ಆಗಲೇ ಅವಳು ತನ್ನ ಸುತ್ತ ಕಣ್ಣು ಹಾಯಿಸಿದ್ದು.

ಬೊಕ್ಕ ತಲೆಯ ಹೆಡ್‌ಕ್ಲಾರ್ಕ್ ರಾಮಣ್ಣ, ಬೆಕ್ಕಿನ ಕಣ್ಣಿನ ಸುರೇಶ್, ಸದಾ ಹಲ್ಲು ಗಿಂಜುವ ಶ್ರೀಪತಿರಾವ್, ಮೂಗಿನ ತುದಿಗೆ ಕನ್ನಡಕ ಜಾರಿಸಿಕೊಂಡಿರುವ ಸುಬ್ರಹ್ಮಣ್ಯಂ ಅವರುಗಳ ದೃಷ್ಟಿ ಸಂಧ್ಯಾಳತ್ತ ಕೇಂದ್ರೀ ಕೃತವಾಗಿತ್ತು. ಟೈಪ್‌ರೈಟರ್ ಮೇಲೆ ಕೈ ಊರಿ ಇವಳತ್ತಲೇ ನೋಡುತ್ತಿದ್ದ ರೀಟಾಳ ಮುಖದ ಭಾವನೆ ಓದಲಾಗಲಿಲ್ಲ. ಎಲ್ಲದಕ್ಕಿಂತ ಆಶ್ಚರ್ಯವೆಂದರೆ ಗಂಭೀರವಾಗಿ ತನ್ನ ಕೆಲಸದಲ್ಲೇ ನಿರತನಾಗಿರುತ್ತಿದ್ದ ರವಿ ಕೂಡ ಸಂಧ್ಯಾಳ ಮುಖದಲ್ಲಿದ್ದ ಹೊಸಕಳೆ ನೋಡಿ ಚಕಿತಗೊಂಡಿದ್ದ. 'ಬಾಸ್' ಕೋಣೆಗೆ ಹೋಗಿ ಅರ್ಧ ತಾಸು ಚರ್ಚೆ ಮಾಡಿ ಬಂದಮೇಲೆ ಆಫೀಸಿನ ವಾತಾ ವರಣ ಹೀಗಾದದ್ದು ಅವಳಿಗೆ ಮುಜುಗರ ತಂದಿತು.

ಅದೊಂದು ಆರ್ಕಿಟೆಕ್ಟ್‌ಗಳ ಕಂಪನಿ. ಖ್ಯಾತ ಆರ್ಕಿಟೆಕ್ಟ್ ಚಂದ್ರೇಕರ್ ಅದರ 'ಬಾಸ್'. ಸಂಧ್ಯಾ ಬಿ. ಇ. ಮುಗಿಸಿದ ಕೆಲವೇ ದಿನಗಳಲ್ಲಿ ಜೂನಿಯರ್ ಆರ್ಕಿಟೆಕ್ಟ್ ಆಗಿ ಸೇರಿದಳು. ಎರಡೇ ವರ್ಷಗಳಲ್ಲಿ ಪ್ರತಿಭೆಯಿಂದ ಬಾಸ್‌ಗೆ ಬಲಗೈ ಆದಳು. ಇದೀಗ ವಿದೇಶಕ್ಕೆ ಹೋಗುವ ಅವಕಾಶ ಬಂದಿದೆ. ಚಂದ್ರೇಕರ್ ಕಂಪನಿಗೆ ವಿದೇಶ ಸಂಪರ್ಕ ಹೆಚ್ಚು. ಅನೇಕ ರಾಷ್ಟ್ರಗಳ ಕಟ್ಟಡ ವಿನ್ಯಾಸಗಳಲ್ಲಿ ಚಂದ್ರೇಕರ್ ಅವರ ಕುಶಲತೆ ಇದೆ. ಇಂಗ್ಲೆಂಡಿನ ಸಂಸ್ಥೆಯೊಂದರಲ್ಲಿ ಒಂದು ವರ್ಷ ವಿಶೇಷ ತರಬೇತಿಗಾಗಿ ಎರಡು ವಿದ್ಯಾರ್ಥಿವೇತನ ಚಂದ್ರೇಕರ್ ಅವರಿಗೆ ಬಂದಿತು. ತಮ್ಮ ಕಂಪನಿಯ ಪ್ರತಿಭಾವಂತರಾದ ಸಂಧ್ಯಾ ಮತ್ತು ಮುರಳಿಯನ್ನು ಕಳಿಸುವ ಇಚ್ಛೆ ಅವರಿಗೆ. ಅದನ್ನೇ ಅವರು ಸಂಧ್ಯಾಳ ಜತೆ ಚರ್ಚಿಸಿದ್ದು.

ತಕ್ಷಣ ಸಂಧ್ಯಾಗೆ ಸುರೇಂದ್ರನ ನೆನಪು ಬಂತು. ಅವನು ಈ ವಿಚಾರವನ್ನು ಹೇಗೆ ಸ್ವೀಕರಿಸುತ್ತಾನೆ? ಅವನಿಗೆ ಹೆಮ್ಮೆಯಾಗದೆ ಇದ್ದೀತೆ? ಅವನೆಂಥ ವಿಶಾಲ ಹೃದಯಿ! ಖುಷಿಯಾಗೇ ಸ್ವೀಕರಿಸ್ತಾನೆ.

ಯಾರೂ ತುಟಿ ಬಿಚ್ಚದಿದ್ದರೂ ರಾಮಣ್ಣ ಸುಮ್ಮನೆ ಇರಬೇಕಲ್ಲಾ? "ಏನಮ್ಮಣ್ಣಿ? ಬಾಸ್ ಏನು ಹೇಳಿದ್ರು? ನಮ್ಗೂ ಹೇಳಿ" ಎಂದು ಗುಡುಗಿದರು. ಇನ್ನು ಸುಮ್ಮನೆ ಇರಲಾಗದು. "ನನಗೆ ಒಳ್ಳೇ ಅವ ಕಾಶ ಸಿಗ್ತಾ ಇದೆ. ಮುಂದಿನ ತಿಂಗಳು ಇಂಗ್ಲೆಂಡ್‌ಗೆ ಹೋಗಲು ಚಂದ್ರೇಕರ್ ಹೇಳಿದಾರೆ. ಒಂದು ವರ್ಷದ ತರಬೇತಿ. ಮುರಳೀನ ಕೂಡ ಸೆಲೆಕ್ಟ್ ಮಾಡಿದಾರೆ."

ಹಾ! ಎಂದಿತು ಇಡೀ ಕಚೇರಿ. ರಾಮಣ್ಣ ಅಲ್ಲಿಗೇ ಬಿಡಲಿಲ್ಲ. "ನಿಮ್ಮ ಗಂಡ ಏನು ಹೇಳ್ತಾರೆ? ಅವರ ಒಪ್ಪಿಗೆ ಇಲ್ಲದೇನೆ ನೀವು ಒಪ್ಪಿಬಿಟ್ರಾ?"

25 ವರ್ಷಗಳ ನನ್ನ ವೈದ್ಯಕೀಯ ಜೀವನದಲ್ಲಿ 'ಕನ್ಯಾಪೊರೆ'ಯ ಬಗ್ಗೆ ಸುದ್ದಿ ಎತ್ತಿ ಯಾವ ರೋಗಿಗಳೂ ನನ್ನ ಬಳಿ ಬಂದಿರಲಿಲ್ಲ. ಹಲವರನ್ನು ವಿಚಾರಿಸಿದಾಗ "ಮೊದಲ ರಾತ್ರಿ ಕೆಂಪು ಕಲೆಯನ್ನು ಸಾಬೀತು ಮಾಡಬೇಕಾದ ಯಾವ ಕ್ರಮಗಳೂ ಬಳಕೆಯಲ್ಲಿಲ್ಲ", ಎಂಬ ಸತ್ಯ ತಿಳಿಯಿತು. ಅಂದರೆ ಜನಸಾಮಾನ್ಯರಲ್ಲಿ ರೂಢಿಯಲ್ಲಿಲ್ಲದ ಕನ್ಯಾ ಪಾವಿತ್ರ್ಯದ ಮಾತನ್ನು ಈಗ ಯಾರು ಎತ್ತಿದವರು ? ವಿವಿಧ ಪೀಠಗಳಲ್ಲಿ ಭದ್ರವಾಗಿ ಬೇರೂರಿರುವ ಧರ್ಮಾಂಧರು ಹೊರತು ಬೇರೆಯಲ್ಲ. ಇವರ ದೃಷ್ಟಿಯಲ್ಲಿ ಹೆಣ್ಣು ಕೇವಲ ಕಾಮದ ಗೊಂಬೆ. ಆವಳಿಗೆ ಸ್ವತಂತ್ರ ವ್ಯಕ್ತಿತ್ವವಿಲ್ಲ. ಅವಳು ಗಂಡಿನ ದಾಸಿಯಾಗಲೆಂದೇ ಬದುಕಬೇಕಾದವಳು. ಇಂಥ ಪ್ರಾಚೀನ ಕಲ್ಪನೆಗಳನ್ನು ಇನ್ನಾದರೂ ಇವರು ಬಿಟ್ಟು ಆಧುನಿಕ ಜಗತ್ತಿನ ವಾಸ್ತವಗಳಿಗೆ ಹೊಂದಿಕೊಳ್ಳಲು ಯತ್ನಿಸಬೇಕು.

ಕನ್ಯಾಪೊರೆಯನ್ನು ಮತ್ತೆ ಕೂಡಿಸುವ ಸರ್ಜನರಿಗೆ 15 ಸಾವಿರದಿಂದ 25 ಸಾವಿರದವರೆಗೆ ಖರ್ಚಾಗುತ್ತದಂತೆ. ಅಂದರೆ ಇಂಥದನ್ನು ಮಾಡಿಸಿಕೊಳ್ಳಲು ಶಕ್ತರಾಗಿರುವವರು ಸಮಾಜದ ಮೇಲ್ವರ್ಗದ ಜನ ಮಾತ್ರ. ಇಷ್ಟು ಹಣ ಖರ್ಚು ಮಾಡುವುದೂ ಯಾತಕ್ಕೋಸ್ಕರ? ಒಂದು ರಾತ್ರಿಯಲ್ಲಿ ವಿಧ್ಯುಕ್ತವಾಗಿ ಆ ಪೊರೆಯನ್ನು ಹರಿಯುವುದಕ್ಕೆ. ಕೊಲ್ಲಿ ದೇಶಗಳಲ್ಲಿ ಇಂಥ ಶಸ್ತ್ರಕ್ರಿಯೆ ಮಾಡಿಸಿಕೊಳ್ಳುವವರು ಹೆಚ್ಚಂತೆ. ಪ್ರಪಂಚದ ಯಾವ ಭಾಗದಲ್ಲಿಯೇ ಆಗಲಿ ಇಂಥ ಕೃತ್ಯ ನಡೆಯುವುದನ್ನು ನಾವು ಪ್ರತಿಭಟಿಸಬೇಕು.

'ಹೈಮೆನೊಪ್ಲಾಸ್ಟಿ' ಎಂದು ಕರೆಯಲ್ಪಡುವ ಈ ಸರ್ಜರಿಯನ್ನು 'ಸಾಮಾಜಿಕ ಸೇವೆ' ಎಂದು ಈ ತಜ್ಞ ವೈದ್ಯರು ಹೇಳಿಕೊಂಡಿರುವುದಾಗಿ ವರದಿಯಾಗಿದೆ. ವಾಸ್ತವವಾಗಿ ಹೆಣ್ಣಿಗೆ ಅವಮಾನ ಮಾಡುವಂತಹ, ಅವಳ ವ್ಯಕ್ತಿತ್ವಕ್ಕೆ, ಆತ್ಮಗೌರವಕ್ಕೆ ಧಕ್ಕೆ ತರುವಂತಹ ಈ ಬಗೆಯ ಶಸ್ತ್ರಕ್ರಿಯೆ ಸೇವೆಯಲ್ಲ, ಅನ್ಯಾಯ. ಪಾವಿತ್ರ್ಯದ ಹೆಸರಿನಲ್ಲಿ ಹಣ ಸಂಚಯಿಸುತ್ತಾ ಅಮಾಯಕ ಜನರಿಗೆ ವಂಚನೆ ಮಾಡುತ್ತಿರುವ ಇವರು ಸಮಾಜದ ದೃಷ್ಟಿಯಲ್ಲಿ ನಿಜವಾಗಿಯೂ ಅಪರಾಧಿಗಳು.

ಇಂಥ ಘಟನೆಗಳನ್ನು ಮರ್ಯಾದೆ ಇರುವ ಎಲ್ಲರೂ ತಿರಸ್ಕರಿಸಬೇಕು. ಅವಮಾನಕರವಾದ ಇಂಥ ಚಿಕಿತ್ಸೆಗೆ ಒಳಪಡಲು ಹುಡುಗಿ ಒಪ್ಪಲೇಬಾರದು. ಅಂಥ ಪರಿಸ್ಥಿತಿ ಬಂದರೆ ಒಬ್ಬಳೇ ದುಡಿದುಕೊಂಡು ತಿನ್ನುತ್ತೇನೆ ಎಂಬ ಛಲವನ್ನು ನಮ್ಮ ವಿದ್ಯಾವಂತ ತರುಣಿಯರು ಗಳಿಸಬೇಕು. ತಾಯಿ ತಂದೆಯರೂ ಅಷ್ಟೆ. ಇಂಥ ಪ್ರಯೋಗಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕು. ಹೆಣ್ಣು ಮಕ್ಕಳಿಗೆ ಸಾಕಷ್ಟು ವಿದ್ಯಾಭ್ಯಾಸ ಕೊಡಿಸಿ ಅವರು ತಮ್ಮ ಕಾಲ ಮೇಲೆ ತಾವು ನಿಲ್ಲುವುದಕ್ಕೆ ಅನುವು ಮಾಡಿಕೊಡಬೇಕು. ಮಹಿಳಾ ಸಂಘಟನೆಗಳೂ ಇವುಗಳ ಬಗ್ಗೆ ವ್ಯಾಪಕ ಪ್ರಚಾರ ನಡೆಸಿ ಇಂಥ ಅಮಾನುಷ ಕೃತ್ಯಗಳ ವಿರುದ್ಧ ಜನರ ಪ್ರಜ್ಞೆ ಬಲಗೊಳ್ಳುವಂತೆ ಪ್ರೇರೇಪಿಸಬೇಕು. ಆಗ ಮಾತ್ರ ಇಂಥ ಕೀಳು ಕೆಲಸಗಳಿಗೆ ಪ್ರಚೋದನೆ ಕೊಡುವ ಸಮಾಜಘಾತುಕ ಶಕ್ತಿಗಳು ನಿರ್ನಾಮವಾಗಬಲ್ಲುವು.

ಬತ್ತಿಹೋಗಿರುವ ಥಿಂಕ್ ಟ್ಯಾಂಕ್

ಊರಿನ ಕೆರೆಯಲ್ಲಿ ನೀರಿಲ್ಲದಾಗ ಫಲವತಿಯಾದ ಗರ್ಭಿಣಿ ಹೆಣ್ಣು ಮಕ್ಕಳನ್ನು ಕೆರೆಗೆ ಹಾರ ಕೊಟ್ಟು ಊರಿನ ಗೌಡರು ನೀರು ತಂದರೆಂದು ನಮ್ಮ ನಾಡಿನ ದಂತಕಥೆಗಳು ಹೇಳುತ್ತವೆ. ಆದರೆ ಇಂದಿನ ನಮ್ಮ ಘನ ಸರ್ಕಾರ ನೀರಿಲ್ಲದ ತಿಪ್ಪಗೊಂಡನಹಳ್ಳಿಗೆ ಹೆಣ್ಣು ಮಗಳನ್ನೇನೂ ಬಲಿ ಕೊಡುತ್ತಿಲ್ಲ; ಜನರ ಹಣದಿಂದ 'ಪರ್ಜನ್ಯ ಜಪ' ಮಾಡಿಸಿ ನೀರು ಕೊಡಿಸಬಹುದೆಂದು ಭ್ರಮಿಸಿದೆ. ಇದೇನು ಬೌದ್ಧಿಕ ದಿವಾಳಿತನವೇ ? ಮೂರ್ಖತನದ ಪರಮಾವಧಿಯೇ ? ನೀರಿಗಾಗಿ ಪರದಾಡುವ ಹೆಣ್ಣುಮಕ್ಕಳ ಬಗೆಗೆ ತೋರುತ್ತಿರುವ ಅನುಕಂಪವೇ ? ಇಲ್ಲವೆ 'ಥಿಂಕ್ ಟ್ಯಾಂಕ್'ನಲ್ಲಿ ವಿವೇಚನೆ ಬತ್ತಿಹೋಗಿದೆಯೇ ?

ಸಂಧ್ಯಾ ಬಾಯಿ ತೆರೆವ ಮುನ್ನವೇ ಸುರೇಶ ಕಣ್ಣು ಆಗಲಿಸಿ,

"ಇವರಿಂಗೆಲ್ಲ ಯಾಕ್ರಿ ಗಂಡನ ಒಪ್ಪಿಗೆ? ಏನ್ಸೇ ಆಗಲಿ, ಪ್ರೊಫೆಷನಲ್ ವಿಮೆನ್. ಜತೆಗೆ ವಿಮೆನ್ಸ್ ಲಿಬ್ ಬೇರೆ!"

ಅವನ ವ್ಯಂಗ್ಯೋಕ್ತಿಗೆ ಗಮನಕೊಡದೆ "ರಾಮಣ್ಣ ಅವರೇ, ನಾನು ಒಪ್ಪಿಗೆ ಕೊಟ್ಟಿದೀನಿ. ಇದು ನನ್ನ ವೈಯಕ್ತಿಕ ವೃತ್ತಿಗೆ ಸಂಬಂಧಿಸಿದ್ದು. ಅಲ್ಲದೆ ನನ್ನ ಗಂಡ ನಿಮ್ಮಗಳಂತೆ ಅಲ್ಲ. ಹೆಂಡತಿ ಪ್ರತಿಭೇನ ಗುರ್ತಿಸೋ ಶಕ್ತಿ ಇದೆ," ಎಂದು ಸಂಧ್ಯಾ ಒತ್ತಿ ಹೇಳಿದಳು.

ಸಂಜೆ ಸಮೀಪಿಸಿದಂತೆ ಸಂಧ್ಯಾಳ ಮನ ಗರಿಗೆದರಿತು. ಸುರೇಂದ್ರನಿಗೆ ಯಾವಾಗ ಸಿಹಿ ಸುದ್ದಿ ತಿಳಿಸ್ತೀನೊ ಎಂಬ ಕಾತುರದಲ್ಲೇ ಮನೆ ಹೊಕ್ಕಳು. ಸಹೋದ್ಯೋಗಿಗಳಿಗೆ ಸಿಹಿ ಕೊಡಿಸಿ ಮನೆಗೆ ಬರಲು ಎಂದಿಗಿಂತ ಒಂದು ಗಂಟೆ ತಡವಾಗಿತ್ತು.

ಸುರೇಂದ್ರ ಆರಾಮಾಸನದ ಮೇಲೆ ಕೂತೇ ಕೋಪದ ದೃಷ್ಟಿ ಚೆಲ್ಲಿದ. ಸಂಧ್ಯಾ ಒಳಗಡಿ ಇಡುತ್ತಿದ್ದಂತೆ "ಏನಿದು ತಡಾ? ಪಾಪಿ ಗಂಡ ನರಳ್ತಾ ಇದಾನೆ ಅನ್ನೋದು ತಿಳೀಬೇಡ್ವಾ? ನಡಿ, ನಡಿ, ಕಾಫಿ ಮಾಡಿ ತಾ. ತಲೆ ಸಿಡೀತಾ ಇದೆ," ಎಂದು ಗರ್ಜಿಸಿದ. ಸಂಧ್ಯಾಳ ಉತ್ಸಾಹ ಜರ್ರನೆ ಇಳಿಯಿತು. ಅವನೊಂದಿಗೆ ಈಗ ಮಾತನಾಡಿ ಪ್ರಯೋಜನ ಇಲ್ಲವೆಂದು ಒಳ ಹೊಕ್ಕಳು. ಯಾವುದೋ ಸಹೋದ್ಯೋಗಿಯ ಉಪ ದೇಶ ಇರಬೇಕು. ಇವರಿಗೆ ಇನ್ನೇನು ಕೆಲಸ? ಹೆಂಡತಿ ಎಂದರೆ ಇವರ ಬಾಯಿ ಚಪಲ ತೀರಿಸೋ ಯಂತ್ರ ಅಂತ ಭ್ರಮಿಸಿಕೊಂಡಿರ್ತಾರೆ. ಅವರ ಮಾತು ಕೇಳಿ ಇವನು ಹೀಗಾಡ್ತಾನೆ ಎಂದು ಸಂಧ್ಯಾ ಕಾಫಿಯತ್ತ ಗಮನ ಹರಿಸಿದಳು.

ಒಬ್ಬರ ಪ್ರತಿಭೆ ಗುರ್ತಿಸಿ ವಿದೇಶಕ್ಕೆ ಕಳುಹಿಸುವು ದೆಂದರೆ ಸಾಮಾನ್ಯಾನ? ರಾಜಕೀಯ–ಗೂಂಡಾಗಿರಿ ಯಲ್ಲಿ ಪ್ರತಿಭೆಗೆ ಪುರಸ್ಕಾರವೆಲ್ಲಿದೆ? ನನಗೆ ದೊರೆತಿರುವ ಅವಕಾಶ ಎಂಥ ಖುಷೀ ವಿಚಾರ....ಎಂದು ಸ್ವಗತದಲ್ಲೇ ಸಂಧ್ಯಾ ಕಾಫಿ ಹಿಡಿದು ಬಂದಳು. "ಸೂರೀ....ನಿಂಗೆ ಒಂದು ಸಿಹಿ ಸುದ್ದಿ. ಏನಿರಬಹುದು ಹೇಳು?"

ಸಿಡುಕಿನ ಅಮಲಿನಲ್ಲೇ ಇದ್ದ ಸುರೇಂದ್ರ.

'ಏನದು? ಆಫೀಸಿನಲ್ಲಿ ಯಾರಾದ್ರೂ ನಿನ್ನ ಮುದ್ದು ಮುಖದ ಬಗ್ಗೆ ಪ್ರಶಂಸೆ ಮಾಡಿದರಾ? ಅಥವಾ ಮಗು ಬರುವ ಸೂಚನೆಯೊ?'

'ನಿನ್ನ ಬುದ್ಧಿ ಓಡೋದು ಅಷ್ಟರಲ್ಲೇನು? ಅಥವ ಜಗತ್ತಿನಲ್ಲಿ ಇನ್ನೇನೂ ವಿಚಾರಗಳೇ ಇಲ್ಲವೆ? ನನ್ನ ಪ್ರತಿಭೆಗೆ ಏನೂ ಪುರಸ್ಕಾರವೇ ಇಲ್ಲ ಅಂದ್ಕೊಂಡ್ಯಾ?'

'ಏನಂಥಾ ಪುರಸ್ಕಾರ?'

'ಹಾಗೆ ಕೇಳು, ಹೇಳ್ತೀನಿ. ನಾನು ಮುಂದಿನ ತಿಂಗಳು ಇಂಗ್ಲೆಂಡ್‌ಗೆ ಹೋಗಬೇಕು. ವಿಶೇಷ ತರಬೇತಿ ಗಾಗಿ ಸ್ಕಾಲರ್‌ಶಿಪ್ ಬಂದಿದೆ. ಚಂದ್ರೇಕರ್ ಅವರು ನನ್ನ ಮತ್ತು ಮುರಳೀನ ಆರಿಸಿದ್ದಾರೆ....'

ಸುರೇಂದ್ರನಿಗೆ ಶಾಕ್ ಆಯ್ತೊ, ತಿಳಿಯದು. ಆದರೆ ಸಂಧ್ಯಾ ನಿರೀಕ್ಷಿಸಿದ್ದ ಸಂತೋಷ, ಹೆಮ್ಮೆ ಏನೂ ಆಗ ಲಿಲ್ಲ. 'ಯಾವಾಗ ಒಪ್ಪಿಗೆ ಸೂಚಿಸಬೇಕಂತೆ?' ಎಂದು ಮಾತ್ರ ಪ್ರಶ್ನಿಸಿದ. ಧ್ವನಿಯಲ್ಲಿ ನೀರಸ, ಕೋಪ ಎಲ್ಲಾ ಇತ್ತು.

'ಏನು, ನನ್ನ ಅಭಿನಂದಿಸೋದಿಲ್ವೆ? ನಿಂಗೆ ಹೆಮ್ಮೆ ಆಗ್ತಾ ಇಲ್ವಾ?'

'ಹೆಮ್ಮೆ! ಗಂಡನ್ನ ಬಿಟ್ಟು ಒಂದು ವರ್ಷ ಹೋಗ್ತೀನಿ ಅಂತ ಹೇಳೋ ಹೆಂಡ್ತಿ ಬಗ್ಗೆ ಹೆಮ್ಮೆ! ಇದು ನನಗಂತೂ ಸುತರಾಂ ಇಷ್ಟವಿಲ್ಲ. ಅದೂ ನಿನ್ನ ಸಹೋದ್ಯೋಗಿ ಜತೆ ಒಂದು ವರ್ಷ ತರಬೇತಿಗೆ ಹೋಗೋದು ಸ್ವಲ್ಪವೂ ಚೆನ್ನಾಗಿರೊಲ್ಲ....'

'ಸೂರಿ, ಏನಿದು ನಿನ್ನ ಮಾತು? ನನ್ನ ಡ್ರಾಯಿಂಗ್ಸ್‌ನ ನೀನೇ ಕೊಂಡಾಡುತ್ತಾ ಇದ್ದೆ; ಅದಕ್ಕೆ ಪುಟವಿಟ್ಟಂತೆ ಅವಕಾಶ ಬಂದಿರೋವಾಗ ಕಳ ಕೊಳ್ತಾರಾ?'

'ಒಂದು ನಿರ್ಧರಿಸಬೇಕು ನೀನು. ಇಂಥ ಅವಕಾಶ ಎಂದು ಹೇಳಿ ಹೊರದೇಶಕ್ಕೆ ಹೋಗಲು ನಿರ್ಧರಿಸಿದರೆ ನಾವು ಬೇರೆ ಬೇರೆಯಾಗಿ ಬದುಕುವುದನ್ನು ನಿರ್ಧರಿಸಿ ದಂತೆಯೇ. ಇಲ್ಲೇ ಇದ್ದರೆ ಸಹಬಾಳ್ವೆ....'

ಅವನ ನಿಖರವಾದ ಮಾತು ಕೇಳಿ ಸಂಧ್ಯಾಗೆ ಶಾಕ್ ಆಗಲಿಲ್ಲ, ಜಿಗುಪ್ಸೆಯಾಯಿತು. ಸೂರಿ ಹೇಗೆ ಬದಲಾಗಿದ್ದಾನೆ! ಪ್ರೇಮ ವಿವಾಹ....ಇಬ್ಬರೂ ಅಪ್ಪ-ಅಮ್ಮಂದಿರನ್ನು ತ್ಯಜಿಸಿ ಮದುವೆಯಾದವರು. ಸಹ ಬಾಳ್ವೆಯಲ್ಲಿ ಸಮಾನತೆ ಮುಖ್ಯ, ವೃತ್ತಿ ನಿರತರಾದ ಇಬ್ಬರೂ ಇದನ್ನರಿತು ಬದುಕಬೇಕೆಂದು ನಿರ್ಧರಿಸಿಕೊಂಡಿದ್ದರು. ಆದರೆ ಮದುವೆಯಾದ ಮೇಲೆ ಸುರೇಂದ್ರ ಬದಲಾಗತೊಡಗಿದ್ದ. ಪ್ರತಿಭಾವಂತ ಪತ್ನಿ ಎಂದರೆ ಪತಿಗೆ ಅಸೂಯೆ ಇರಬಹುದೆ? ಹೊರದುಡಿವ ಹೆಣ್ಣಿನ ಜೊತೆಗೆ ಇರಬೇಕಾದ ರೀತಿಯಂತೂ ಅವನದಾಗಿರಲಿಲ್ಲ. ಸದಾ ಅಧಿಕಾರ ಚಲಾಯಿಸುವ, ಪ್ರತಿಯೊಂದನ್ನು ಪ್ರಶ್ನಿಸುವ ಗಂಡ ಅವನಾದ. ಆದರೂ ಸಂಧ್ಯಾ ಹೊರಗಿನ ಪ್ರತಿಷ್ಠೆಗಾಗಿ ಒಳಗಿನ ಪ್ರಲಾಪ ತಡೆದುಕೊಂಡಳು. ಆದರೆ ಈಗ........ಅವನು ಇನ್ನೂ ನನ್ನನ್ನು ಅಭಿನಂದಿಸಿಲ್ಲ!

ನಿರುತ್ಸಾಹದಿಂದ ಸಂಧ್ಯಾ ಒಳನಡೆದಳು. ಸಂಘರ್ಷ ಏರತೊಡಗಿತು. ಸೂರನ್ನು ನೋಡುತ್ತ ಕೂತಿದ್ದ ಸೂರಿಯನ್ನು ನೋಡಿ ಕರುಣೆ ಮೂಡಲಿಲ್ಲ. ಸ್ವಾರ್ಥಕ್ಕಾಗಿ ಎಲ್ಲರ ಹಿತ ಮರೆವ ಅಮಾನುಷನಂತೆ ಕಂಡ. ಅವನಲ್ಲಿದ್ದ ಪ್ರೀತಿ-ವಿಶ್ವಾಸ ಎಲ್ಲಾ ಗಾಳಿಯೊಡನೆ ಲೀನವಾಗುತ್ತಿರುವಂತೆ ಅವಳಿಗೆ ಭಾಸವಾಯಿತು. ಸ್ವಾಭಿಮಾನವೇ ಬದುಕಿನ ಮಂತ್ರ ಎಂದು ನಂಬಿದ್ದ ತನಗೆ ಎಂಥ ಪೆಟ್ಟು ಕೊಡಬಯಸುತ್ತಾನೆ! ಇವನ ಹಿಡಿತದಿಂದ ಪಾರಾಗುವುದೇ ಸೂಕ್ತ. ಇಲ್ಲವಾದರೆ ನನ್ನ ಇಡೀ ಬದುಕಿಗೇ ಕಂಬಿಕಟ್ಟಿ ಜಯದ ನಗೆ ಹರಿಸುತ್ತಾನೆ. ಓಡುತ್ತಿದ್ದ ಸಂಧ್ಯಾಳ ಮನ ಗಕ್ಕನೆ ನಿಂತಿತು. ಬದುಕಿನ ನಿರ್ಧಾರದಿಂದ ನೆಮ್ಮದಿ ನಿಧಾನವಾಗಿ ಮೂಡಿಬಂದಿತು.

(ಇಂಗ್ಲಿಷ್ ಕತೆಯೊಂದರ ಪ್ರೇರಣೆ)

'ಸಂಗಾತಿ'ಯ ಬಿಡುಗಡೆ



ಹೇಮಲತಾ ಮಹಿಷಿಯವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ 'ಸಂಗಾತಿ' ಪತ್ರಿಕೆಯನ್ನು ಬಿಡುಗಡೆ ಮಾಡುತ್ತಾ ಡಾ|| ಡಿ. ವಿಜಯಾರವರು "ಈ ಪತ್ರಿಕೆ ಮಹಿಳಾ ಹೋರಾಟಕ್ಕೊಂದು ಸೈದ್ಧಾಂತಿಕ ನೆಲೆಯನ್ನು ಕೊಡುವ ಪ್ರಯತ್ನವಾಗಲಿ," ಎಂದು ಹಾರೈಸಿದರು.

ನಾಜಿ ವಿರೋಧಿ ಹೋರಾಟಗಾರ್ತಿ ನೂರಿ

● ಆಶಾ

ವ್ಯಕ್ತಿ ವಿಶೇಷ...

ನಾಗರೀಕತೆ, ಸಂಸ್ಕೃತಿಗಳನ್ನು ಭಗ್ನಗೊಳಿಸಲು ಹೊರಟ ಹಿಟ್ಲರನ ಫ್ಯಾಸಿಸ್ಟ್ ದೌರ್ಜನ್ಯಗಳ ವಿರುದ್ಧ ಹೋರಾಡಿ ಜೀವತೆತ್ತ ವೀರರಲ್ಲಿ ಮಹಿಳೆಯರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅಂತಹ ವೀರಾಗ್ರಣಿಗಳಲ್ಲಿ ನೂರಿ ಒಬ್ಬಳು.

ಮೊಟ್ಟಮೊದಲ ಬಾರಿಗೆ ಕರ್ನಾಟಕದ ಇತಿಹಾಸದಲ್ಲಿ ಬ್ರಿಟಿಷರನ್ನು ದಿಟ್ಟತನದಿಂದ ಎದುರಿಸಿದ ಕಲಿ ಟಿಪ್ಪು ಸುಲ್ತಾನ್. ಆ ಕುಟುಂಬದ ರಕ್ತದಲ್ಲಿ ಹರಿದುಬಂದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಕಿಚ್ಚನ್ನು ಆರದಂತೆ ಮುಂದುವರಿಸಿಕೊಂಡು ಹೋದದ್ದಲ್ಲದೆ ಹಿಟ್ಲರನ ವಿರುದ್ಧದ ಹೋರಾಟದಲ್ಲಿ ಅಪ್ರತಿಮ ಸಾಹಸ ತೋರಿಸಿದ ನೂರಿ ಅಥವಾ ನೂರ್ ಉನ್ನೀಸಾ ಟಿಪ್ಪುಸುಲ್ತಾನನ ಮರಿಮಗಳು. ವಿಶ್ವಸಾಹಿತಿ ಟಾಲ್‌ಸ್ಟಾಯ್‌ನ ಆಹ್ವಾನದ ಮೇರೆಗೆ ಅವಳ ತಂದೆ ಇನಾಯತ್ ಖಾನ್ ಮತ್ತು ತಾಯಿ ನೋರಾ ಬೇಕರ್ ಮಾಸ್ಕೋಗೆ ಅತಿಥಿಗಳಾಗಿ ಹೋಗಿದ್ದರು. ಆಗ ನೂರಿ ಅಲ್ಲಿ ಹುಟ್ಟಿದಳು. ಅಕ್ಟೋಬರ್ ಕ್ರಾಂತಿಯ ನಂತರ ಇಡೀ ಕುಟುಂಬ ಲಂಡನ್‌ಗೆ ಹೋಗಿ, ಅಲ್ಲಿಂದ ನಂತರ ಪ್ಯಾರಿಸ್ಸಿಗೆ ಹೋಗಿ ನೆಲೆಸಿದರು. ಅಲ್ಲಿ ಅವಳು ಪೌರ್ವಾತ್ಯ ವಿಷಯಗಳನ್ನು ಅಭ್ಯಾಸ ಮಾಡಿದಳು. ಸಂಗೀತದಲ್ಲಿ ಅಪಾರ ಪರಿಣತಿ ಹೊಂದಿದ್ದ ನೂರಿ ಶಿಶು ಸಾಹಿತ್ಯ ರಚಿಸಿದಳು. 'ಇಪ್ಪತ್ತು ಜಾತಕ ಕಥೆಗಳು' ಎಂಬ ಪುಸ್ತಕ ಪ್ರಕಟಿಸಿದಳು. ಪತ್ರಿಕೆಯೊಂದನ್ನು ಆರಂಭಿಸಿದಳು. ದೆಹಲಿಯಲ್ಲಿ ಅವಳ ತಂದೆಗಾಗಿ ನಿರ್ಮಿಸಿರುವ ಗೋರಿಯನ್ನು ಸಂದರ್ಶಿಸಲು 1927ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ನೂರಿ ಬರೋಡಾ, ಅಜ್ಮೀರ್‌ನ್ನು ನೋಡಿಕೊಂಡು 1928ರಲ್ಲಿ ವಾಪಸ್ಸು ಪ್ಯಾರಿಸ್ಸಿಗೆ ಹಿಂತಿರುಗಿದಳು.

ಇದರ ನಂತರದ ದಿನಗಳು ನೂರಿಯ ಜೀವನದಲ್ಲಿ ಸ್ಮರಣಾರ್ಹವಾದವು. 1940ರಲ್ಲಿ ಫ್ರಾನ್ಸನ್ನು ನಾಜಿಗಳು ಆಕ್ರಮಿಸಿದಾಗ ಇಂಗ್ಲೆಂಡಿಗೆ ಹೋದ ನೂರಿ ಅಲ್ಲಿ ಮಹಿಳೆಯರ ಸಹಾಯಕ ವಾಯುದಳವನ್ನು ಸೇರಿದಳು. ಅಲ್ಲಿ ವೈರ್‌ಲೆಸ್ ಮತ್ತು ಪ್ಯಾರಾಶೂಟ್‌ಗೆ ಸಂಬಂಧಿಸಿದಂತೆ ತರಬೇತಿ ಪಡೆದಳು. 1943ರ ಜೂನ್ 16ರಂದು ಜೀನ್ ಮೇರಿ ರೆಗ್ನೀರ್ ಎಂಬ ಹೆಸರಿನಿಂದ ಪ್ಯಾರಿಸ್ಸಿನಲ್ಲಿ ಪ್ಯಾರಾಶೂಟ್‌ನಿಂದ ಇಳಿದು ಬ್ರಿಟನ್‌ಗೆ ಸಂದೇಶ ಕಳುಹಿಸುವ ಕೆಲಸ ಮಾಡುತ್ತಿದ್ದಳು. ಆಗ ಒಮ್ಮೆ ಜರ್ಮನ್ ಪೋಲೀಸ್ ಗುಪ್ತದಳದವನೊಬ್ಬ ಬೆನ್ನಟ್ಟಿ ಬಂದ. ಅವಳು ಅವನನ್ನು ಗುಂಡಿಟ್ಟು ಕೊಂದಳು. ಆದರೆ ಸ್ವಲ್ಪ ದಿನಗಳ ನಂತರ ಅವಳು ಪೋಲೀಸ್ ಗುಪ್ತದಳದವರ ಕೈವಶವಾದಳು. ಆಗ "ನೀವು ನನ್ನಿಂದ ರೇಡಿಯೋ ಟ್ರಾನ್ಸ್‌ಮಿಟರನ್ನು ಕಸಿದುಕೊಳ್ಳಬಹುದು. ಆದರೆ ನಾನು ಏನನ್ನೂ ಹೇಳುವುದಿಲ್ಲ", ಎಂದಳು. ಅಲ್ಲಿಂದ ಅವಳನ್ನು ಪ್ಯಾರಿಸ್ಸಿನ ಗುಪ್ತದಳದ ಮುಖ್ಯ ಕಛೇರಿಗೆ ಕರೆದೊಯ್ದರು. ಅಲ್ಲಿಂದ ತಪ್ಪಿಸಿಕೊಂಡು ಓಡಿಹೋಗುವ ಪ್ರಯತ್ನದಲ್ಲಿದ್ದಾಗ ಸಿಕ್ಕಿಬಿದ್ದಳು. ಅವಳನ್ನು ಭಯಂಕರ ಚಿತ್ರಹಿಂಸೆಗೆ ಗುರಿಪಡಿಸಿದರೂ ವಿಚಲಿತಳಾಗಲಿಲ್ಲ. 1944ರ ಸೆಪ್ಟೆಂಬರ್ 12ರಂದು ಅವಳನ್ನು ಭಯಂಕರ ಡಾಕೌ ಕಾನ್ಸೆಂಟ್ರೇಷನ್ ಕ್ಯಾಂಪ್‌ನಲ್ಲಿ ಗುಂಡಿಟ್ಟು ಕೊಂದರು. ಅಲ್ಲಿಗೆ ಅವಳ ಕ್ರಾಂತಿಕಾರಿ ಜೀವನದ ಕೊನೆಯಾಯಿತು.

ಯುದ್ಧದ ನಂತರ ಬ್ರಿಟಿಷ್ ಮತ್ತು ಫ್ರೆಂಚ್ ಸರ್ಕಾರಗಳು ಅವಳಿಗೆ ಮರಣಾನಂತರದ ಪ್ರಶಸ್ತಿ, ಪದವಿಗಳನ್ನು ಕೊಟ್ಟು ಗೌರವಿಸಿವೆ. ಆದರೆ ಭಾರತದಲ್ಲಿ ಅವಳ ನೆನಪನ್ನು ಉಳಿಸುವಂತೆ ಮಾಡುವ ಯಾವುದೇ ಸ್ಮಾರಕವೂ ಇಲ್ಲದಿರುವುದು ವಿಷಾದನೀಯ. ಫ್ಯಾಸಿಸಂ ವಿರುದ್ಧದ ಸಮರದ ವಿಜಯದ ನಲವತ್ತನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಾದರೂ ಭಾರತ ಸರ್ಕಾರವು ನೂರಿಯ ನೆನಪಿಗೆ ಯಾವ ರೀತಿಯಲ್ಲಾದರೂ ಸ್ಮಾರಕ ನಿರ್ಮಿಸುವುದು ಆಗತ್ಯ ಹಾಗೂ ಔಚಿತ್ಯಪೂರ್ಣವಲ್ಲವೇ? ಈ ವರ್ಷದ ಮೇ 8, 9ರಂದು ಇಡೀ ವಿಶ್ವವೇ ಫ್ಯಾಸಿಸ್ಟ್ ವಿರೋಧಿ ಸಮರದಲ್ಲಿ ಭಾಗಿಯಾದವರಿಗೆ ನಮನ ಸಲ್ಲಿಸುತ್ತಿದೆ. ಈ ಸಂದರ್ಭದಲ್ಲಿ ವೀರಾಗ್ರಣಿ ನೂರಿಗೆ ನಮ್ಮ ನಮನ.

ಪೌಷ್ಟಿಕಾಂಶದ ಆಹಾರ ನೀಡುವುದು. 16 ರಿಜಿಸ್ಟರ್‌ಗಳಲ್ಲಿ ಟಿಪ್ಪಣಿ ನಮೂದಿಸುವುದು. ಇದು ನಮ್ಮ ಕಾರ್ಯರೂಪ," ಎಂದು ಅಂಗನವಾಡಿ ಶಿಕ್ಷಕಿಯೊಬ್ಬರು ಹೇಳುತ್ತಾರೆ.

ಒಂದು ವರ್ಷಕ್ಕೆ ನೂರು ಅಂಗನವಾಡಿಗಳಿಗೆ ಸರ್ಕಾರ ನೀಡುವ ಹಣ 17 ಲಕ್ಷ ರೂಪಾಯಿಗಳು. ಇದಲ್ಲದೆ ಯೂನಿಸೆಫ್, ಕೇರ್‌ನಂಥ ಸಂಸ್ಥೆಗಳೂ ಸಾಕಷ್ಟು ನೆರವು ನೀಡುತ್ತಿವೆ. ನಗರ ಪ್ರದೇಶಗಳಲ್ಲಿ ಹಾಲು–ಬ್ರೆಡ್ ಮಾತ್ರ ವಿತರಿಸಿದರೆ ಗ್ರಾಮಾಂತರಗಳಲ್ಲಿ ಪೌಷ್ಟಿಕಾಂಶ ಆಹಾರವನ್ನೇ ಕೊಡಲಾಗುತ್ತಿದೆ.

"ಹೊಣೆ ಹೆಚ್ಚಾದರೂ ಸಂಬಳ ಮಾತ್ರ 250 ರೂ." ಎಂದು ಕಾರ್ಯಕರ್ತೆ ಮಂಜುಳಾ ಹೇಳಿದರೆ, "ಹೋರಾಟದಿಂದ ಅಷ್ಟಾದರೂ ಸಿಕ್ಕಿದೆ," ಎಂದು ಮತ್ತೊಬ್ಬ ಕಾರ್ಯಕರ್ತೆ ಲಲಿತಾ ಹೇಳಿದರು.

"ನಮ್ಮದು ನಿರಂತರ ಹೋರಾಟ. ಈ ಯೋಜನೆ 1975ರಲ್ಲಿ ಜಾರಿಗೆ ಬಂತಾದರೂ 81ರ ವರೆಗೆ ಹೆರಿಗೆ ರಜೆ ಮತ್ತಿತರ ಸೌಲಭ್ಯಗಳಿರಲಿಲ್ಲ; ಹೋರಾಟ ನಡೆಸಿದ್ದರಿಂದ ಹೆರಿಗೆ ರಜೆ, ರಜೆ ಕಾಲದಲ್ಲಿ ವೇತನ ಮಂಜೂರಾಯಿತು. ಮಹಿಳೆಯರೇ ಅಧಿಕವಾಗಿರುವ ಇಂಥದೊಂದು ಯೋಜನೆಯಲ್ಲಿ ಹೆರಿಗೆ ರಜೆ ಇರಲಿಲ್ಲ ಎಂದರೆ ನಾಚಿಕೆಗೇಡು," ಎಂದು ಅಂಗನವಾಡಿ ಕಾರ್ಯಕರ್ತರ ಹೋರಾಟದ ಮುಂಚೂಣಿಯಲ್ಲಿರುವ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಉದ್ಯೋಗಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಸಿ. ಚಂದ್ರಮ್ಮ ಹೇಳುತ್ತಾರೆ. ಆರ್. ಕಸ್ತೂರಿ ಇದರ ಅಧ್ಯಕ್ಷೆ. ಸಂಘದ ಸದಸ್ಯತ್ವ 23,000 ವನ್ನೂ ಮೀರಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯಕರ್ತೆಯರು ಎದುರಿಸುವ ಸಮಸ್ಯೆಗಳೇನು ?

"ಅಲ್ಲಿ ಅಧಿಕಾರಿಗಳ ದೌರ್ಜನ್ಯ ಹೆಚ್ಚು. ಒಬ್ಬ ಕಾರ್ಯಕರ್ತೆ ದೂರದ ಹಳ್ಳಿಯಲ್ಲಿ ಕೇಂದ್ರ ಸ್ಥಾಪಿಸಲು ಹೆಣಗಾಡಬೇಕಾಗುತ್ತದೆ. ಅಲ್ಲಿನ ಮುಖಂಡನ ಕೃಪೆ ಹಾಗೂ ಆಹಾರ ಸಾಮಗ್ರಿ ಪಡೆಯಲು ತಾಲ್ಲೂಕಿನ ಅಧಿಕಾರಿಯ ಕೃಪೆ ಆವರ ಮೇಲಿರಬೇಕು. ತಾಲ್ಲೂಕು ಕೇಂದ್ರದಿಂದ ಹಳ್ಳಿಗೆ ತಾನೇ ಒಂದು ತಿಂಗಳ ಆಹಾರ ಸಾಮಗ್ರಿ ಒಯ್ಯಬೇಕು. ಅಳತೆ ಕಡಿಮೆಯಾದರೆ ಆವಳೇ ದಂಡ ತೆತ್ತಬೇಕು. ಜೊತೆಗೆ ಲೈಂಗಿಕ ಹಲ್ಲೆ ಬೇರೆ."

"ಅಂಥ ಉದಾಹರಣೆಗಳಿವೆಯೇ ?"

"ಯಾಕಿಲ್ಲ ? ಕೊಪ್ಪದ ಬಳಿ ಕೆಲಸ ಮುಗಿಸಿಕೊಂಡು ಬರುತ್ತಿದ್ದ ಕಾರ್ಯಕರ್ತೆಯೊಬ್ಬರ ಮೇಲೆ ಅತ್ಯಾಚಾರ, ಕೊಲೆ ಆಯಿತು. ಮತ್ತೊಂದು ಕಡೆ ಅಧಿಕಾರಿಯೊಬ್ಬರ ಬಲಾತ್ಕಾರ ತಾಳಲಾರದೆ ಒಬ್ಬಳು ರಾಜೀನಾಮೆ ನೀಡಿ ಹೋದಳು."

"ನಿಮ್ಮ ಹೋರಾಟದಲ್ಲಿ ಮುಖ್ಯ ಜಯಗಳಾವುವು?"

"ಕನಕಪುರದ ಘಟನೆ. ಅಲ್ಲಿ 278 ಕೇಂದ್ರಗಳಿವೆ. ಅಲ್ಲಿ ಶಿಶು ಕಲ್ಯಾಣ ಅಧಿಕಾರಿಯಾಗಿದ್ದ ಶ್ರೀಮತಿ ಸುಶೀಲಾ ಅವರು ಕಾರ್ಯಕರ್ತೆಯರಿಗೆ ಸದಾ ಕಿರುಕುಳ ಕೊಡುತ್ತಿದ್ದರು. ವಿನಾಕಾರಣ ಸಂಬಳ ಕಡಿಮೆ ಮಾಡುವುದು, ಹಳ್ಳಿಗಳಿಗೆ ಹಂಚಲು ಕೊಡುವ ಆಹಾರ ಸಾಮಗ್ರಿಗಳಲ್ಲಿ ಪಾಲು ಪಡೆಯುವುದು. ಜೊತೆಗೆ ಗೂಂಡಾ ನೆರವು ಬೇರೆ. ಇದರ ವಿರುದ್ಧ ನಾವು ತೀವ್ರ ಹೋರಾಟ ನಡೆಸಿದೆವು. ಈಗ ಸುಶೀಲಾ ಅವರನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ."

ಇಂಥ ಹಿಂಸೆ, ದೌರ್ಜನ್ಯಗಳ ಮಧ್ಯೆ ಕೆಲಸ ಮಾಡುವ ಕಾರ್ಯಕರ್ತೆಯರು ಯಾವ ಕ್ಷಣದಲ್ಲಾದರೂ ಕೆಲಸ ಕಳೆದುಕೊಳ್ಳಬಲ್ಲರು. ಏಕೆಂದರೆ ಇವರಾರೂ ಸರ್ಕಾರಿ ನೌಕರರೆಂದು ಪರಿಗಣಿತರಾಗಿಲ್ಲ; ಕಾಯಂ ಕೆಲಸಗಾರರಲ್ಲ! ಸರ್ಕಾರ ಇವರ ಶ್ರಮವನ್ನು ಸ್ವಯಂ ಸೇವೆ ಎಂದು ಭಾವಿಸಿದೆ. 250 ರೂ. ಮತ್ತು 90 ರೂ. (ಆಯಾಗಳಿಗೆ)ಗಳನ್ನು 'ಗೌರವಧನ' ಎಂದು ಸಾರಿದೆ. ಇದರಿಂದಾಗಿ ಸದಾ ಅಸ್ಥಿರಸ್ಥಿತಿ.

ಕೆಲಸ ಕಾಯಂ, ಎಲ್ಲ ಸರ್ಕಾರಿ ನೌಕರರಿಗೂ ಸಿಗುವ ಸೌಲಭ್ಯ, ಸರ್ವಿಸ್ ರಿಜಿಸ್ಟರ್, ಸರಕು ಸಾಗಣೆ ಭತ್ಯೆ, ಹಳ್ಳಿಗಳಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ರಕ್ಷಣೆ, ಕೇಂದ್ರಗಳಿಗೆ ಕಟ್ಟಡ ನೀಡುವುದು, ಪದವೀಧರ ಕಾರ್ಯಕರ್ತೆಯರಿಗೆ ಬಡ್ತಿ, ಇವು ಸಂಘವು ಸರ್ಕಾರದ ಮುಂದೆ ಇಟ್ಟಿರುವ ಮುಖ್ಯ ಬೇಡಿಕೆಗಳು.

ಕೇಂದ್ರಗಳಿಗೆ ಕಟ್ಟಡವೆಂದರೆ ನೆನಪು ಬರುತ್ತಿದೆ. ಬೆಂಗಳೂರಿನ ಕಾವೇರಿನಗರ ಮತ್ತು ಯಾರಪ್ಪನಗರ ಕೇಂದ್ರಗಳಿಗೆ ಸ್ವಂತ ಸ್ಥಳಗಳಿಲ್ಲ, ಇದ್ದ ಗುಡಿಸಲು

ಅಂಗನವಾಡಿ ಅಂಗಳದಲ್ಲಿ

ಮೂ[illegible] ಹರಿಯುವ ದುರ್ವಾಸನೆ, ಅಡ್ಡಾದಿಡ್ಡಿ ರಸ್ತೆಯಲ್ಲಿ ಅಲ್ಲಲ್ಲೇ [illegible] ಬಿಟ್ಟಿರುವ ಕೊಳಚೆ ನೀರು; ಕಕ್ಕಸ್ಸಿಗೆ ಕೂತ ಮಕ್ಕಳು, ಹೇನು ತೆಗೆಯುವ ಹೆಂಗಸರು, ಕಾಯಿಲೆಯಿಂದ ಕಮರಿ ಹೋಗಿರುವ ವೃದ್ಧರು........

ಇದು ಯಾವ ಚಿತ್ರದ ದೃಶ್ಯವೂ ಅಲ್ಲ, ಆಧುನಿಕತೆಯಿಂದ ಬೀಗುತ್ತಿರುವ ಬೆಂಗಳೂರಿನ ಅಂಚಿಗೇ ಅಂಟಿಕೊಂಡಿರುವ, ಪ್ರಸಿದ್ಧ ಬನಶಂಕರಿ ದೇವಸ್ಥಾನದ ಬಳಿಯ ಬನಶಂಕರಿ ಕೊಳೆಗೇರಿ ಇದು. ಇದನ್ನೆಲ್ಲಾ ದಾಟಿ ಹೋದರೆ ಸಿಗುತ್ತದೆ 'ಹಾಲು–ಬ್ರೆಡ್ಡು' ಶಾಲೆ ಅಥವಾ ಅಂಗನವಾಡಿ ಕೇಂದ್ರ.

ಈಗ ಇದು ಬನಶಂಕರಿ ಕೊಳೆಗೇರಿಗೆ ಸೀಮಿತವಲ್ಲ. ಇಂಥ ಸಹಸ್ರ ಸಹಸ್ರ ಕೊಳೆಗೇರಿಗಳಲ್ಲಿ ಸಾವಿರಾರು ಅಂಗನವಾಡಿಗಳಿವೆ. ಇಡೀ ಕರ್ನಾಟಕದಲ್ಲಿ 7900 ಕೇಂದ್ರಗಳಿವೆ. ನಗರಗಳ ಕೊಳೆಗೇರಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ಒಂದು ಸಾವಿರ ಜನ ಸಂಖ್ಯೆಗೆ ಒಂದು ಅಂಗನವಾಡಿ ಕೇಂದ್ರ. ಈ ಕೇಂದ್ರಗಳ ಚುಕ್ಕಾಣಿ ಹಿಡಿದಿರುವವರು ಅಂಗನವಾಡಿ ಕಾರ್ಯಕರ್ತೆ ಅಥವಾ ಶಿಕ್ಷಕಿಯರು. ಅವರ ನೆರವಿಗೆ ಸಹಾಯಕಿಯರು (ಆಯಾಗಳು). ರಾಜ್ಯದಲ್ಲಿ ಅಂಥ 23,000 ಕಾರ್ಯಕರ್ತೆಯರಿದ್ದಾರೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಆಶ್ರಯದಲ್ಲಿ ನಗರ ಕೊಳೆಗೇರಿ ಮತ್ತು ಗ್ರಾಮಾಂತರ ಪ್ರದೇಶಗಳ ಮಹಿಳೆಯರು ಮತ್ತು ಶಾಲಾ ಪೂರ್ವ ಮಕ್ಕಳಿಗೆ ಪೌಷ್ಟಿಕಾಂಶ ಆಹಾರ ನೀಡುವ ಕಾರ್ಯಕ್ರಮದ ಫಲವೇ ಅಂಗನವಾಡಿ ಕೇಂದ್ರ.

ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ ಒಂದಾಗಿದ್ದ ಮಹಿಳಾ ಮತ್ತು ಶಿಶು ಕಲ್ಯಾಣ ಕಾರ್ಯಕ್ರಮಕ್ಕೆ ಪೂರಕವಾಗಿರುವ ಅಂಗನವಾಡಿ ರೂಪುಗೊಂಡು 10 ವರ್ಷಗಳಾಗಿವೆ. ಆರು ವರ್ಷದೊಳಗಿನ ಮಕ್ಕಳ ಪೌಷ್ಟಿಕ ಮತ್ತು ಆರೋಗ್ಯ ಸ್ಥಿತಿ ಸುಧಾರಣೆ, ಸರಿಯಾದ ಮಾನಸಿಕ ಮತ್ತು ದೈಹಿಕ ಬೆಳವಣಿಗೆ, ಮಕ್ಕಳಲ್ಲಿ ಅಕಾಲ ಮರಣ ತಪ್ಪಿಸುವುದು, ಶಾಲೆ ಬಿಡುವ ಮಕ್ಕಳ ಸಂಖ್ಯೆ ಕಡಿಮೆ ಮಾಡುವುದು, ಹಾಗೂ ಮಗುವಿನ ಆರೋಗ್ಯ ರಕ್ಷಣೆಯಲ್ಲಿ ತಾಯಿಯ ತಿಳುವಳಿಕೆ ಹೆಚ್ಚಿಸುವುದು,– ಇದು ಈ ಅಂಗನವಾಡಿ ಹಿಂದಿರುವ ತತ್ವ.

ಈ ತತ್ವ ಕಾರ್ಯರೂಪಕ್ಕೆ ಬರಲು ಅಂಗನವಾಡಿ ಕಾರ್ಯಕರ್ತೆಯರ ಶ್ರಮ ಬಹುಮುಖ್ಯ. ಇವರ ಕಾರ್ಯ ನಿರ್ವಹಣೆ ಮೇಲ್ವಿಚಾರಣೆಗೆ ಸೂಪರ್‌ವೈಜರ್ ಮತ್ತು ಶಿಶು (ಅಭಿವೃದ್ಧಿ) ಕಲ್ಯಾಣ ಅಧಿಕಾರಿಗಳಿದ್ದಾರೆ. 20 ಕೇಂದ್ರಗಳಿಗೆ ಒಬ್ಬರು ಸೂಪರ್‌ವೈಜರ್ ಮತ್ತು 100 ಕೇಂದ್ರಗಳಿಗೆ ಒಬ್ಬ ಶಿಶು ಕಲ್ಯಾಣ ಅಧಿಕಾರಿ. ಇಷ್ಟೆಲ್ಲ

ದುಡಿಯುವ ಮಹಿಳೆ

ಅಧಿಕಾರಿಗಳ ಸಮೂಹವೇ ಇದ್ದರೂ ದುರ್ಬಲ ವರ್ಗದವರ ಜೊತೆ ಮಿಲನಗೊಂಡು ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವ ಕಾರ್ಯಕರ್ತೆಯರ ಕಾರ್ಯನಿರ್ವಹಣೆ ಅತಿಪ್ರಮುಖ.

"ಸರ್ಕಾರದಿಂದ ಇಂಥ ಕೇಂದ್ರಕ್ಕೆಂದು ನೇಮಕವಾದ ಕೂಡಲೇ ಅಲ್ಲಿಗೆ ಹೋಗುತ್ತೇವೆ. ಅಲ್ಲಿನ ಯುವಕ ಸಂಘ, ಪಂಚಾಯ್ತಿ ಅಥವಾ ಸ್ಥಳೀಯ ನಾಯಕರ ಜೊತೆ ಚರ್ಚಿಸಿ ಕೇಂದ್ರಕ್ಕೆ ಸ್ಥಳ ಹುಡುಕುತ್ತೇವೆ. ಅವರ ಸಹಕಾರ ಇದ್ದರೆ ಎಲ್ಲವೂ ಸುಗಮ. ಇದರ ನಂತರ ಇಡೀ ಕೇರಿಯ ಸಮೀಕ್ಷೆ. 0-6 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿಯರ ಪತ್ತೆ ಹಚ್ಚುವ ಕಾರ್ಯ. ನಂತರ ಆ ಮಕ್ಕಳು (3 ರಿಂದ 6 ವರ್ಷ) ಕೇಂದ್ರಕ್ಕೆ ಬರುವಂತೆ ಮಾಡುವುದು. ಜೊತೆಗೆ ನಿಃಶಕ್ತಿಯಿಂದಿರುವ, ಕಡು ಬಡವರಾದ ಗರ್ಭಿಣಿ ಸ್ತ್ರೀಯರೂ ಕೇಂದ್ರಕ್ಕೆ ಬಂದು ಹಾಲು ಒಯ್ಯುವಂತೆ ಮಾಡುವುದು. ಮಕ್ಕಳಿಗೆ ಹಾಲು–ಬ್ರೆಡ್ ಅಲ್ಲದೆ ಆರಂಭಿಕ ಅಕ್ಷರಾಭ್ಯಾಸ, ಶುಚಿತ್ವದ ಜ್ಞಾನ ನೀಡುವುದು. ಇದೇ ಕೇರಿಯಲ್ಲಿ ಆರೋಗ್ಯ ಶಿಕ್ಷಣ ಪ್ರಸಾರ, ವೈದ್ಯಕೀಯ ನೆರವು ಪಡೆಯಲು ನೆರವು, ಪ್ರತಿತಿಂಗಳೂ ಮಕ್ಕಳ ತೂಕ ನೋಡಿ, ಸರಾಸರಿಗಿಂತ ಕಡಿಮೆ ತೂಕ ಇರುವ ಮಕ್ಕಳಿಗೆ ಹೆಚ್ಚಿನ

ಕುಸಿಯಿತು. ಈಗ ರಸ್ತೆಯೇ ಶಾಲೆ. ಕಲ್ಮಶ ನೀರು ಹರಿವ ಸ್ಥಳದಲ್ಲಿಯೇ ಮಕ್ಕಳಿಗೆ ಹಾಲು–ಬ್ರೆಡ್ ಹಂಚಿಕೆ. ಗರ್ಭಿಣಿಯರಿಗೆ ಹಾಲು ನೀಡುವ ತಾಣ. ಅಂತೆಯೇ ಅಂಬೇಡ್ಕರ್ ನಗರದಲ್ಲಿ ಕೂಡ. ಚಪ್ಪರದ ಕೆಳಗೆ ಕೇಂದ್ರದ ಕಾರ್ಯನಿರ್ವಹಣೆ. ಕಾಯಂ ಕಟ್ಟಡಕ್ಕೆ ಕಾರ್ಯಕರ್ತೆಯರ ನಿರಂತರ ಯತ್ನ ನಡೆದಿದೆ. ಸರ್ಕಾರದ ಯೋಜನೆ ಪ್ರಶಂಸಾರ್ಹ. ಆದರೆ ರೂಪುಗೊಂಡ ಯೋಜನೆ ಕಾರ್ಯರೂಪಕ್ಕೆ ಬರಲು ಮೂಲ ಸೌಲಭ್ಯ ಬೇಡವೆ ? ಅದೇ ಅಷ್ಟು ಅಭಾವವಾದರೆ ಹೇಗೆ? ಅಥವಾ ಸಂಪೂರ್ಣವಾಗಿ ಮಹಿಳೆಯರೇ ಕೆಲಸ ಮಾಡುತ್ತಿರುವ ಯೋಜನೆ ಇದೆಂದು ಅಸಡ್ಡೆಯೋ ? ಅವರನ್ನು ಹೇಗೆ ನಡೆಸಿಕೊಂಡರೂ ಅವರ ಸಹನೆ ಮೀರಲಾರದೆಂದು ಉಪೇಕ್ಷೆಯೋ ?

ಎಲ್ಲ ತಾಯಂದಿರೂ ತಮ್ಮ ಕಂದಮ್ಮಗಳನ್ನು......

(ನಾಟಕ ವಿಮರ್ಶೆ)

● ಅಲಾಮ

ಸಮುದಾಯ ತಂಡವು ಇತ್ತೀಚಿಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಿದ ಬ್ರೆಕ್ಟನ "ತಾಯಿ" ನಾಟಕ ನೋಡುತ್ತಿದ್ದಂತೆ ಆ 'ತಾಯಿ' ನಮ್ಮ ಇತ್ತೀಚಿನ ಕನ್ನಡ ಸಾಹಿತ್ಯದ ಇಬ್ಬರು ಅವ್ವಂದಿರನ್ನು ನನ್ನ ನೆನಪಿಗೆ ತಂದಳು.

ಗಾರ್ಕಿಯ ಕಾದಂಬರಿಯ 'ತಾಯಿ', ಬ್ರೆಕ್ಟನ ನಾಟಕದ 'ತಾಯಿ', ಲಂಕೇಶರ ಕವಿತೆಯ ಅವ್ವನಿಂದ, ನಮ್ಮೆಲ್ಲರ ಒಡಲಾಳದ ದೇವನೂರರ ಸಾಕವ್ವನಿಂದ ಭಿನ್ನವಾಗಿ ನಿಲ್ಲುತ್ತಾಳೆ. ಅಡುಗೆ ಮಾಡಿ ಬಡಿಸಿ ಅಗುಳಿತ್ತುವ, ಮನೆಯ ಅಸಂಖ್ಯ ಕೆಲಸಗಳನ್ನು ಮಾಡುವ, ಮಕ್ಕಳನ್ನು ಹೆತ್ತು ಹೊತ್ತು ಸಾಕಿ ಸಲಹುವ, ಗಂಡನ ಸಾವಿರ ತಂಟೆ ತಾಪತ್ರಯ ಎದುರಿಸಿ ಅವನನ್ನೂ, ಅವನ ಮಕ್ಕಳನ್ನೂ ತಿದ್ದಿ ದಾರಿಗೆಳೆವ, ಮನೆಯೊಳಿತಿಗಾಗಿ ಬೈದು ಗೊಣಗಿ ಗುದ್ದಾಡಿ ಕಾಸು ಗಂಟಿಕ್ಕುವ, ಗಾಂಧೀಜಿ ರಾಮಕೃಷ್ಣರ ಸತಿಯರಂತಲ್ಲದ, ಸತಿಸಾವಿತ್ರಿ ಊರ್ಮಿಳೆಯಲ್ಲದ, ಭಗವದ್ಗೀತೆ ಗೊತ್ತಿಲ್ಲದ ಮತ್ತು ಬೇಡವಾದ ಈ ಕನ್ನಡದ ಅವ್ವಂದಿರಂತೆಯೇ ಈ ರಷ್ಯನ್ ತಾಯಿಯೂ ಸಹಜ ನಿಷ್ಕಾಮ ಕರ್ಮಿ. ಇವಳಿಗೆ ತಾನು ಎಂಬುವ ತವಕವಿಲ್ಲ; ತನ್ನ ಮಗ, ತನ್ನ ಮನೆ ಎಂಬ ತವಕ ಇದೆ. ಅಷ್ಟರ ಮಟ್ಟಿಗೆ ಇವಳೂ ಮಾನವ ಸಹಜವಾದ ಕಾಮನೆ ಮತ್ತು ವ್ಯಾಮೋಹವುಳ್ಳವಳು. (ಕಾಮದ ಸೋಂಕೇ ಇಲ್ಲದ ಕರ್ಮ ಭಗವದ್ಗೀತೆಯನ್ನು ಹುಟ್ಟಿಹಾಕಿದ ಅತಿಜಾಣರ ಧೂರ್ತತರ್ಕದಲ್ಲಿ ಮಾತ್ರ ಸಾಧ್ಯವಲ್ಲವೆ?) ಆದರೆ ಲಂಕೇಶ, ದೇವನೂರರ ಅವ್ವ ಮತ್ತು ಸಾಕವ್ವಂದಿರ ತಾಯ್ತನ ತಮ್ಮ ಮನೆ, ತಮ್ಮ ಮಕ್ಕಳು, ತಮ್ಮ ಆಕಳು-ಕರು ಅಥವಾ ಹೇಂಟೆ ಹುಂಜಗಳನ್ನು ಮಾತ್ರ ಸಾಕಿ ಸಲಹಿದರೆ ಗಾರ್ಕಿ ಬ್ರೆಕ್ಟರ 'ತಾಯಿ'ಯ ತಾಯ್ತನ ಅವಳ ಕುಟುಂಬವನ್ನು ಮೀರಿ ಎಲ್ಲೆಡೆಯೂ ವರ್ಷಿಸುತ್ತ ಪಸರಿಸುತ್ತದೆ.

ನಮ್ಮ ಸಾಕವ್ವಂದಿರು ಇಡೀ ಜಗತ್ತಿನ ತಾಯಂದಿರಾಗುವ ಬಗೆಯೇ ಗಾರ್ಕಿ–ಬ್ರೆಕ್ಟರ ಆ ಹೆಸರಿನ ಕಾದಂಬರಿ—ನಾಟಕಗಳ ವಸ್ತು. ಲಂಕೇಶ, ದೇವನೂರರ ಅವ್ವ ಸಾಕವ್ವಂದಿರಲ್ಲಿ ಒಂದು ಅನಿವಾರ್ಯ ಹಾಗೂ ನೈಸರ್ಗಿಕ ಸುಗುಣವಾಗಿ ಕಾಣಿಸಿಕೊಳ್ಳುವ ಪ್ರೀತಿ–ವಾತ್ಸಲ್ಯ ಹಾಗೂ ಆ ಪ್ರೀತಿ–ವಾತ್ಸಲ್ಯದಿಂದ ಹುಟ್ಟುವ ಅನ್ಯಾಯವಿರೋಧೀ ಕೆಚ್ಚು ಗಾರ್ಕಿ-ಬ್ರೆಕ್ಟರ ತಾಯಿಯಲ್ಲಿ ತನ್ನ ಮಗನಂಥ ಎಲ್ಲರಿಗಾಗಿ ಹೋರಾಡುವ ತಾಯಿಯ ಪ್ರೀತಿಪೂರ್ವಕ ಪ್ರಜ್ಞೆಯಾಗಿ ರೂಪುಗೊಳ್ಳುತ್ತ ಹೋಗುತ್ತದೆ. ಪಾವೆಲ್‌ನ ಅವ್ವ ಎಲ್ಲರ ತಾಯಿ ಆಗುತ್ತಾಳೆ.

ಇದರಿಂದ ಪೆಲೀಜಿಯಾ ವ್ಲಾಸೋವಾ ತನ್ನ ಮಗನನ್ನು ಮರೆತು ಘೋಷಣೆ ಕೂಗುವ ಕ್ಷುಲ್ಲಕ ಚಳುವಳಿಗಾರ್ತಿಯಾಗಿ ಹೋಗುತ್ತಾಳೆಂದು ತಿಳಿಯಬಾರದು. ಈ ತಾಯಿ ಚಳುವಳಿಗಾರ್ತಿ ಆಗುವುದು ಮಗನ ಮೇಲಿನ ಪ್ರೀತಿಯಿಂದ. ನಾಯಕಿಯಾಗುವ ಭರಾಟೆ

ಆಕೆಗಿಲ್ಲ. ಚಳುವಳಿಯ ಹುಮ್ಮಸ್ಸಿನಲ್ಲಿ ಆಕೆಗೆ ಆ ಪ್ರೀತಿ ಕಡಿಮೆಯಾಗುವುದಿಲ್ಲ. ವ್ಲಾಸೋವಾ ಕರಪತ್ರ ಹಂಚುವ ತೀರ್ಮಾನ ಕೈಗೊಳ್ಳುವ ದೃಶ್ಯ, ಸೆರೆಮನೆಯಲ್ಲಿ ಮಗನನ್ನು ಭೇಟಿಯಾಗಿ ನಾಲ್ಕು ಪ್ರೀತಿಯ ಮಾತನ್ನೂ ಆಡಲಾರದೆ ಯಾವ್ಯಾವುದೋ ಕ್ರಾಂತಿಕಾರಿಗಳ ಹೆಸರುಗಳನ್ನು ಸಂಗ್ರಹಿಸುವುದರಲ್ಲೇ ಭೇಟಿಯ ಕಾಲವನ್ನು ವ್ಯಯ ಮಾಡಿಬಿಡುವ ದೃಶ್ಯ, ಸೆರೆಮನೆಯಿಂದ ಬಿಡುಗಡೆಯಾಗಿ (ಅಥವಾ ತಪ್ಪಿಸಿಕೊಂಡು ?) ಬಂದ ಪಾವೆಲ್ ತಾಯಿಯ ಜೊತೆ ಕಾಲು ಗಂಟೆ ಕೂಡ ಕಳೆಯಲಾಗದೆ ಮತ್ತೆ ತಲೆ ಮರೆಸಿಕೊಂಡು ಫಿನ್‌ಲ್ಯಾಂಡ್‌ಗೆ ಹೊರಡಬೇಕಾಗುವ ದೃಶ್ಯ–ಇಂಥ ಕಡೆಗಳಲ್ಲಿ ಕರ್ತವ್ಯ ಹಾಗೂ ಸಮಯದ ಒತ್ತಡದಿಂದಾಗಿ ಮಗನ ಬಗ್ಗೆಯ ತನ್ನ ಪ್ರೀತಿಯನ್ನು ಮನಸಾರ ತೋಡಿಕೊಳ್ಳಲಾಗದ ಆ ತಾಯಿಯ ಸಂಕಟ ಜಯಶ್ರೀ ಅವರ ಅಭಿನಯದಲ್ಲಿ ಹೃದಯಂಗಮವಾಗಿ ಮಿಂಚುತ್ತದೆ.

ಸುಮಾರು ಹತ್ತು ವರ್ಷಗಳ ಹಿಂದೆ ಪ್ರಸನ್ನ ಅವರ ನಿರ್ದೇಶನದಲ್ಲಿ 'ಸಮುದಾಯ'ವು ಅಭಿನಯಿಸಿದ ಈ ನಾಟಕ ಈಗ ಹೊಸದಾಗಿ, ಹೊಸ ರೀತಿಯಲ್ಲಿ ರಂಗವೇರಿದೆ. ಇದೇ ಪ್ರಯೋಗದಲ್ಲಿ ಒಂದು ರೀತಿಯ ಪ್ರೌಢ, ಅನಾಯಾಸ ಹಾಗೂ ಸಲೀಸಿನ ಓಟ ಕಾಣುತ್ತದೆ. ಹತ್ತು ವರ್ಷದ ಹಿಂದಿನ ಆ ಪ್ರಯೋಗದಲ್ಲಿಯೂ 'ತಾಯಿ' ಆಗಿದ್ದ ಜಯಶ್ರೀ ಅವರು ಈ ಪುನರ್ ಪ್ರಯೋಗದಲ್ಲಿ ಅಲ್ಲಲ್ಲಿ ಇದ್ದಕ್ಕಿದ್ದಂತೆ ತೋರಿಸುವ ಸೂಕ್ಷ್ಮ ಭಾವನಾತ್ಮಕ ಆಳಗಳನ್ನು ಇದೇ ಪ್ರೌಢಿಮೆಯಿಂದ ಆಗ ತೋರಿಸಿ ನಮ್ಮನ್ನು ಒಳಸೆಳೆದಂತೆ ನೆನಪಿಲ್ಲ. ಇದು ಈ ಸುಮಾರು ಹತ್ತು ವರ್ಷದಲ್ಲಿ ನಿರ್ದೇಶಕ–ನಟ–ತಂಡ ಎಲ್ಲರೂ ಮಾಗಿರುವುದರ ಫಲ ಎನಿಸುತ್ತದೆ. ಅಥವಾ ಹತ್ತು ವರ್ಷದ ಹಿಂದೆ ತೀರ ಎಳೆಯನಾಗಿದ್ದ ನಾನು ಇಂಥ ಸೂಕ್ಷ್ಮಗಳನ್ನು ಗಮನಿಸಲಿಲ್ಲವೋ ?

ಕೊನೆಯದಾಗಿ, ನಾನು ನಾಟಕ ನೋಡಿದ ಏಪ್ರಿಲ್ 13 ರಂದು ನಾಟಕ ನೋಡಲು ಬಂದ ಅನೇಕ ಜನ ತಾಯಂದಿರು ತಮ್ಮ ಹಸುಗೂಸುಗಳನ್ನು ಎತ್ತಿಕೊಂಡು ಬಂದಿದ್ದರು. ಅವು ಆಗಾಗ ಕಿರೋ ಕಿರೋ ಎಂದು ಅಳುತ್ತಿದ್ದುದು ಕೆಲವು ಜನ ಪ್ರೇಕ್ಷಕರ ಗೊಣಗಾಟಕ್ಕೆ ಕಾರಣವಾಯಿತು. ನಾನಂತೂ ಖುಷಿಪಟ್ಟೆ. ಆ ಮಕ್ಕಳ ಚೀರು–ಕೇಕೆ, "ನಾವಿದ್ದೇವೆ, ನಾವಿದ್ದೇವೆ; ಈ ನಾಟಕ, ನಾಳಿನ ಈ ಜಗತ್ತು ನಮಗಾಗಿ, ನಮಗಾಗಿ; ಮರೆಯಬೇಡಿ,"ಎಂದು ನಮ್ಮನ್ನೆಲ್ಲ ಎಚ್ಚರಿಸುವಂತಿತ್ತು. ಇನ್ನು ಮೇಲೆ ಎಲ್ಲ ತಾಯಂದಿರೂ ತಮ್ಮ ಕಂದಮ್ಮಗಳನ್ನು ಇಂಥ ನಾಟಕಗಳಿಗೆ ಕಂಕುಳಿಗೇರಿಸಿ ತರಲಿ.